<table>
<tr><th rowspan="2">ಅವಧಿ</th><th rowspan="2">ಸಮಯ ಹಂಚಿಕೆ</th><th colspan="5">ಮೂರನೇ ತರಗತಿ</th><th colspan="5">ಐದನೇ ತರಗತಿ</th></tr>
<tr><th>ವಿಷಯ ಮತ್ತು ಪಾಠದ ಹೆಸರು</th><th>ಸಾಮರ್ಥ್ಯದ ವಿವರ</th><th>ಬಳಸ ಬಹುದಾದ ಕಲಿಕಾ ಸಾಮಗ್ರಿ</th><th>ನಿರ್ವಹಣೆ</th><th>ಕಲಿಕಾ ಪ್ರಕ್ರಿಯೆ</th><th>ವಿಷಯ ಮತ್ತು ಪಾಠದ ಹೆಸರು</th><th>ಸಾಮರ್ಥ್ಯದ ವಿವರ</th><th>ಬಳಸ ಬಹುದಾದ ಕಲಿಕಾ ಸಾಮಗ್ರಿ</th><th>ನಿರ್ವಹಣೆ</th><th>ಕಲಿಕಾ ಪ್ರಕ್ರಿಯೆ</th></tr>
<tr><td>1</td><td>2</td><td>3</td><td>4</td><td>5</td><td>6</td><td>7</td><td>8</td><td>9</td><td>10</td><td>11</td><td>12</td></tr>
<tr><td rowspan="2">3ನೇ ಅವಧಿ</td><td>20 ನಿ</td><td rowspan="2">ಪರಸರ ಅಧ್ಯಯನ<br>ಪ್ರಾಣಿ ಪ್ರಪಂಚ</td><td rowspan="2">* ಪ್ರಾಣಿಗಳ ವಾಸಸ್ಥಳ, ದೇಹದಗಾತ್ರ, ಆಕಾರಗಳನ್ನು ಗುರುತಿಸುವರು.</td><td rowspan="2">* ವಿವಿಧ ಬಗೆಯ ಪ್ರಾಣಿಗಳ ಚಿತ್ರಪಟ ಗಳು</td><td>ಶಿಕ್ಷಕರು</td><td>ಶಿಕ್ಷಕರು ಮಕ್ಕಳಿಗೆ ಪ್ರಾಣಿಗಳ ಚಿತ್ರಪಟಗಳನ್ನು ತೋರಿಸುತ್ತಾ ಆ ಪ್ರಾಣಿಗಳ ವಾಸಸ್ಥಳಗಳ ಬಗ್ಗೆ ಹೇಳುವರು.</td><td rowspan="2" colspan="5">5ನೇ ತರಗತಿಯು<br>4ನೇ ತರಗತಿಯೊಂದಿಗೆ<br>ಹೊಂದಾಣಿಕೆಯಾಗಿರುತ್ತದೆ</td></tr>
<tr><td>60 ನಿ</td><td>ಶಿಕ್ಷಕರು</td><td>ನಂತರ ಈ ಕೆಳಗೆ ಕೊಟ್ಟಿರುವ ಪಟ್ಟಿಯಂತೆ ಪ್ರಾಣಿಗಳ ವಾಸಸ್ಥಳಕ್ಕೆ ಅನುಗುಣವಾಗಿ ಪಟ್ಟಿ ಮಾಡಿಸುವರು.<br>
<table><tr><th>ನೆಲದಲ್ಲಿ ವಾಸಿಸುವ ಪ್ರಾಣಿಗಳು</th><th>ನೀರಿನಲ್ಲಿ ವಾಸಿಸುವ ಪ್ರಾಣಿಗಳು</th><th>ಮರದಲ್ಲಿ ವಾಸಿಸುವ ಪ್ರಾಣಿಗಳು</th></tr><tr><td></td><td></td><td></td></tr><tr><td></td><td></td><td></td></tr><tr><td></td><td></td><td></td></tr></table>
ಹೀಗೆ ಮಕ್ಕಳು ಪ್ರಾಣಿಗಳ ವಾಸಸ್ಥಳಗಳನ್ನು ಗುರುತಿಸಿದ ನಂತರ ಅವುಗಳ ವಾಸಸ್ಥಳಗಳಿಗೆ ಅನುಸಾರವಾಗಿ ಪ್ರಾಣಿಗಳನ್ನು ಭೂವಾಸಿಗಳು, ಜಲವಾಸಿಗಳು, ವೃಕ್ಷವಾಸಿಗಳು ಎಂದು ಕರೆಯುತ್ತಾರೆಂದು ತಿಳಿಸಿ ಅವುಗಳ ವ್ಯಾಖ್ಯೆ ನೀಡಿ ವಿವರಿಸುವರು.<br>ನಂತರ ಮಕ್ಕಳಿಗೆ ವಿಷಯುಕ್ಕನುಗುಣವಾಗಿ ಪ್ರಶ್ನೆಗಳನ್ನು ಕೇಳುವರು.<br>1) ಭೂವಾಸಿಗಳು ಎಂದರೇನು?<br>2) ಜಲವಾಸಿಗಳು ಯಾವುವು ತಿಳಿಸಿ?<br>3) ಮರದಲ್ಲಿ ವಾಸಿಸುವ ಪ್ರಾಣಿಗಳನ್ನು ಏನೆಂದು ಕರೆಯುತ್ತಾರೆ ?</td></tr>
</table>

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ: ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯ ವಿವರ | ಬೋಧನೋಪಕರಣ / ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯ ವಿವರ | ಬೋಧನೋಪಕರಣ / ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4ನೇ ಅವಧಿ | 40 ನಿ | **ಗಣಿತ**<br>**ಪೂರ್ಣಾಂಕಗಳು ಮತ್ತು ಸಂಖ್ಯಾಸೂಚಕಗಳು (ಕನಿಷ್ಠ-ಗರಿಷ್ಠ)** | * 1 ರಿಂದ 999ರವರೆಗಿನ ಸಂಖ್ಯಾ ಸೂಚಕಗಳಲ್ಲಿ ಯಾವುದಾದರೂ 5 ಅಥವಾ 6 ಸಂಖ್ಯೆಗಳನ್ನು ಕೊಟ್ಟಾಗ ಅವುಗಳಲ್ಲಿ ಗರಿಷ್ಠ ಮತ್ತು ಕನಿಷ್ಠ ಸಂಖ್ಯೆಗಳನ್ನು ಪತ್ತೆ ಹಚ್ಚುವರು. | * ಸ್ಥಾನಬೆಲೆ ಪಟ್ಟಿ<br>* ಸಂಖ್ಯೆಗಳ ಮಿಂಚು ಪಟ್ಟಿಗಳು | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ**<br>* ಕೆಳಗೆ ಕೊಟ್ಟಿರುವ ಸಂಖ್ಯೆಗಳನ್ನು ಗಮನಿಸಲು ತಿಳಿಸುವರು. 568, 517, 592, 531, 580 ನಂತರ ಇವುಗಳನ್ನು ಸ್ಥಾನಬೆಲೆ ಪಟ್ಟಿಯಲ್ಲಿ ಗುರುತಿಸುವರು.<br>ನೂರು / ಹತ್ತು / ಬಿಡಿ<br>5 / 6 / 8<br>5 / 1 / 7<br>5 / 9 / 2<br>5 / 3 / 1<br>5 / 8 / 0<br>ನೂರರ ಸ್ಥಾನದಲ್ಲಿರುವ ಅಂಕೆಗಳನ್ನು ಹೋಲಿಸಿದಾಗ ಅವುಗಳು ಪರಸ್ಪರ ಸಮನಾಗಿ ಇರುವುದರಿಂದ ಹತ್ತರ ಸ್ಥಾನದಲ್ಲಿರುವ ಅಂಕೆಗಳನ್ನು ಹೋಲಿಸುವರು.<br>ಹತ್ತರ ಸ್ಥಾನದಲ್ಲಿರುವ 6, 1, 9, 3, 8ರಲ್ಲಿ ಕನಿಷ್ಠ ಅಂಕೆ [1] ಗರಿಷ್ಠ ಅಂಕೆ [9] ಆದ್ದರಿಂದ ಕನಿಷ್ಠ ಸಂಖ್ಯೆ [517] ಗರಿಷ್ಠ ಸಂಖ್ಯೆ [592] ಎಂದು ತಿಳಿಸಿ. ಇದೇ ರೀತಿ ಮಕ್ಕಳಿಗೆ ಕೆಲವು ಸಂಖ್ಯೆಗಳನ್ನು ನೀಡಿ ಅವರಿಂದ ಮೇಲಿನ ಚಟುವಟಿಕೆ ಮುಂದುವರೆಸುವರು. | | | | | 5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ |
| | 40 ನಿ | ಸಾ.ಉ.ಉ.ಶಾ.<br>ಟೋಪಿ ಮಾಡುವುದು | * ಟೋಪಿ ಮಾಡುವುದನ್ನು ತಿಳಿಯುವರು. | | ಶಿಕ್ಷಕರು | ಶಿಕ್ಷಕರು ಬಣ್ಣದ ಕಾಗದವನ್ನು ಬಳಸಿ ಮಾದರಿಯಾಗಿ ಒಂದು ಟೋಪಿಯನ್ನು ಮಾಡಿ ತೋರಿಸಿ ಮಾಡುವ ವಿಧಾನವನ್ನು ಮಕ್ಕಳಿಗೆ ಅರ್ಥವಾಗುವಂತೆ ಹಂತ ಹಂತವಾಗಿ ತಿಳಿಸುವರು. ಅದರಂತೆ ಪ್ರತಿ ಮಕ್ಕಳಿಂದ ಒಂದೊಂದು ಟೋಪಿಯನ್ನು ಮಾಡಿಸುವರು. ಚೆನ್ನಾಗಿ ಮಾಡಿದ ವಿದ್ಯಾರ್ಥಿಗಳನ್ನು ಪ್ರಶಂಸಿಸುವರು. ಎಲ್ಲಾ ವಿದ್ಯಾರ್ಥಿಗಳು ಭಾಗವಹಿಸುವಂತೆ ಪ್ರೋತ್ಸಾಹಿಸುವರು. | | | | | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ ಅವಧಿ | 40 ನಿ | ಕನ್ನಡ : ನಿಯಮ ಪಾಲನೆ | * ಪದಗಳ ನಡುವೆ ಇರುವ ಅರ್ಥಪೂರ್ಣ ಸಂಬಂಧವನ್ನು ಅರಿಯುವುದು.<br>* ರಸ್ತೆ ಚಿಹ್ನೆಗಳು ಮತ್ತು ಸೂಚನಾ ಫಲಕಗಳಲ್ಲಿನ ಸರಳ ಸೂಚನೆಗಳನ್ನು ಓದುವುದು. | | ಶಿಕ್ಷಕರು | ಹಿಂದಿನ ಅವಧಿಯಲ್ಲಿ ಬೋಧಿಸಲಾದ ಗದ್ಯ ಭಾಗವನ್ನು ಎಲ್ಲ ಮಕ್ಕಳಿಗೂ ಕೇಳಿಸುವ ಹಾಗೆ ಸ್ಪಷ್ಟವಾಗಿ ಓದಿಸುವರು.<br>ತಪ್ಪುಗಳನ್ನು ತಿದ್ದುವರು. | ಕನ್ನಡ : ಸಂಗೊಳ್ಳಿ ರಾಯಣ್ಣ | * ನಿರರ್ಗಳವಾಗಿ ಹಾಗೂ ಸಹಜವಾಗಿ ಮಾತನಾಡುವುದು.<br>* ಸನ್ನಿವೇಶ ಹಾಗೂ ಘಟನೆಗಳನ್ನು ವಿವರಿಸುವುದು. | ಅಭ್ಯಾಸ ಹಾಳೆ | ಹಿರೇಮಣಿ | ಶಿಕ್ಷಕರು ನೀಡಿದ ಸೂಚನೆಯಂತೆ ಹಿಂದಿನ ಅವಧಿಯ ಅಭ್ಯಾಸ ಚಟುವಟಿಕೆಗಳನ್ನು ಪರಿಶೀಲಿಸಿ ತಪ್ಪುಗಳನ್ನು ತಿದ್ದುತ್ತಾ ಮುಂದಿನ ಅಭ್ಯಾಸದ ಚಟುವಟಿಕೆಗಳನ್ನು ಮಕ್ಕಳಿಂದ ಮಾಡಿಸುವನು. ಶಿಕ್ಷಕರು ಮಾರ್ಗದರ್ಶನ ನೀಡುವರು. |
| | 40 ನಿ | | | | ಶಿಕ್ಷಕರು | ಹಿಂದಿನ ಅವಧಿಯಲ್ಲಿ ಬೋಧಿಸಲಾದ "ರಾಧ, ರವಿ ಶಾಲೆಗೆ ಹೋಗುತ್ತಿದ್ದರು ........................................ ಮೂವರೂ ಶಾಲೆಗೆ ಹೊರಟರು". ಇಲ್ಲಿಯವರೆಗಿನ ಗದ್ಯಭಾಗವನ್ನು ಓದುತ್ತಾ ವಿವರಿಸುವರು. ಬಾಯ್ದೆರೆ ಓದಿನ ಸಮಯದಲ್ಲಿ ಮಕ್ಕಳು ಪಟ್ಟಿ ಮಾಡಿದ ಹೊಸ ಪದಗಳ ಅರ್ಥ ತಿಳಿಸುವರು. | ಜೀವನ ವಿಜ್ಞಾನ : ಭಕ್ತ ಪ್ರಹ್ಲಾದನ ಕಥೆ | ಭಕ್ತಿಯ ಪ್ರಾಮುಖ್ಯತೆಯನ್ನು ತಿಳಿಯುವರು. | ಗ್ರಂಥಾಲಯದ ಕಥೆ ಪುಸ್ತಕಗಳು | ಹಿರೇಮಣಿ | ಶಿಕ್ಷಕರ ಸೂಚನೆಯಂತೆ ಗ್ರಂಥಾಲಯದಲ್ಲಿನ ಭಕ್ತ ಪ್ರಹ್ಲಾದನ ಕಥೆಯ ಪುಸ್ತಕವನ್ನು ಮಕ್ಕಳಿಗೆ ಕೊಟ್ಟು ಹಿರೇಮಣಿಗೆ ಕಥೆಯನ್ನು ಓದಲು ಹೇಳುವರು.<br>ಎಲ್ಲಾ ಮಕ್ಕಳು ಆಲಿಸುವರು. ಭಕ್ತಿಯ ಪ್ರಾಮುಖ್ಯತೆಯನ್ನು ಅರಿತು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರೇರೇಪಿಸುವರು. |

| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2ನೇ ಅವಧಿ | 10 ನಿ | ಜೀವನ ವಿಜ್ಞಾನ : ಕೆರೆ–ದಡ ಆಟ | * ಆಟದಲ್ಲಿ ಸಕ್ರಿಯವಾಗಿ ಭಾಗವಹಿಸುವುದು | | ಶಿಕ್ಷಕರು | ಕೆರೆ–ದಡ ಆಟದ ನಿಯಮಗಳನ್ನು ಮಕ್ಕಳಿಗೆ ತಿಳಿಸಿ ಎಲ್ಲರೂ ಸಕ್ರಿಯವಾಗಿ ಭಾಗವಹಿಸುವಂತೆ ತಿಳಿಸುವರು. | ಗಣಿತ<br>ವಿವಿಧ ಸಂಖ್ಯೆಗಳು ಸಂಖ್ಯಾ ಗಣಗಳು | ರೋಮನ್ ಸಂಖ್ಯೆಗಳನ್ನು ಅಭ್ಯಾಸ ಮಾಡುವುದು. | | ಹಿರೇಮಣಿ | ಅಂಕಿಗಳ ಮಿಂಚು ಪಟ್ಟಿಗಳನ್ನು ಮಕ್ಕಳಿಗೆ ಕೊಟ್ಟು ಅದರಲ್ಲಿನ ಅಂಕಿಗಳನ್ನು ಮಕ್ಕಳಿಂದ ಓದಿಸುವರು. |
| | 30 ನಿ | | | | ಹಿರೇಮಣಿ | ಎಲ್ಲಾ ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ ಹಿರೇಮಣಿಯು ಕೆರೆ–ದಡ ಆಟವನ್ನು ಆಡಿಸುವನು. ಹಿರೇಮಣಿಯ ನಿರ್ದೇಶನದಂತೆ ಎಲ್ಲಾ ಮಕ್ಕಳು ಆಟದಲ್ಲಿ ಪಾಲ್ಗೊಳ್ಳುವರು. | | | | ಶಿಕ್ಷಕರು | ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ ಒಂದೊಂದೇ ಮಗುವನ್ನು ತನ್ನ ಕೈಬೆರಳಿನಿಂದ ಪಠ್ಯಪುಸ್ತಕದ ಪುಟ ಸಂಖ್ಯೆ–32ರಲ್ಲಿರುವಂತೆ ತೋರಿಸಲು ಹೇಳುವುದು. ನಂತರ ಎಲ್ಲಾ ರೋಮನ್ ಸಂಖ್ಯೆಗಳನ್ನು ಕ.ಹ. ಮೇಲೆ ಬರೆದು ಅದರಂತೆ ಮಕ್ಕಳು ಬರೆದುಕೊಳ್ಳಲು ತಿಳಿಸುವರು. |
| | 40 ನಿ | ಸಾ.ಉ.ಉ.ಕಾ – ಮಣ್ಣಿನ ಮಾದರಿಗೆ ಬಣ್ಣ ಹಾಕುವುದು. | * ಬಣ್ಣಗಳ ಅರಿವು ಮೂಡಿಸುವುದು.<br>* ಹಣ್ಣುಗಳ ಬಣ್ಣವನ್ನು ಅರಿಯುವುದು. | * ಮಣ್ಣಿನ ಮಾದರಿಗಳು<br>* ಬಣ್ಣಗಳು | ಹಿರೇಮಣಿ | ಹಿಂದೆ ತಯಾರಿಸಿರುವ ಮಣ್ಣಿನಿಂದ ಮಾಡಿರುವ ಹಣ್ಣಿನ ಮಾದರಿಗಳಿಗೆ ಸೂಕ್ತ ಬಣ್ಣವನ್ನು ಶಿಕ್ಷಕರ ಮಾರ್ಗದರ್ಶನದಲ್ಲಿ ಹಾಕುವರು.<br><br>**ಸೂಚನೆ :** 7ನೇ ದಿನದ 3ನೇ ಅವಧಿಯಲ್ಲಿ ತಯಾರಿಸಿದ ಮಣ್ಣಿನ ಮಾದರಿಗಳಿಗೆ ಬಣ್ಣ ಹಾಕಿಸುವರು. | ------ಕೇಳಿ-ಕಲಿ ಪಾಠವನ್ನು ಕೇಳಿಸುವುದು ------ | | | | |

| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ನಿಮಿಷ | ವಿಷಯ ಮತ್ತು ಸಾಮರ್ಥ್ಯ | ಕಲಿಕಾ ಉದ್ದೇಶ | ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಸಾಮರ್ಥ್ಯ | ಕಲಿಕಾ ಉದ್ದೇಶ | ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ ಅವಧಿ | 10 ನಿ | **ಗಣಿತ**<br>**ಪೂರ್ಣಾಂಕಗಳು ಮತ್ತು ಸಂಖ್ಯಾ ಸೂಚಕಗಳು (ಕನಿಷ್ಠ-ಗರಿಷ್ಠ)** | * 1 ರಿಂದ 999ರವರೆಗಿನ ಸಂಖ್ಯಾ ಸೂಚಕಗಳಲ್ಲಿ ಯಾವುದಾದರೂ 5 ಅಥವಾ 6 ಸಂಖ್ಯೆಗಳನ್ನು ಕೊಟ್ಟಾಗ ಅವುಗಳಲ್ಲಿ ಗರಿಷ್ಠ ಮತ್ತು ಕನಿಷ್ಠ ಸಂಖ್ಯೆಗಳನ್ನು ಪತ್ತೆ ಹಚ್ಚುವರು. | * ಸ್ಥಾನಬೆಲೆ ಕೋಷ್ಟಕ<br>* ಸಂಖ್ಯೆಗಳ ಮಿಂಚು ಪಟ್ಟಿಗಳು | ಶಿಕ್ಷಕರು | * ಮೊದಲು ಶಿಕ್ಷಕರು ಕೆಲವು ಸಂಖ್ಯೆಗಳನ್ನು ನೀಡಿ ಅವುಗಳನ್ನು ಗಮನಿಸಲು ತಿಳಿಸುವರು. | 5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ | | | | |
| | 30 ನಿ | | | | | (728, 721, 725, 720, 723, 726) ನಂತರ ಇವುಗಳನ್ನು ಸ್ಥಾನಬೆಲೆಯ ಪಟ್ಟಿಯಲ್ಲಿ ಗುರುತಿಸಲು ತಿಳಿಸುವರು. (ಕೆಳಗಿನ ಕೋಷ್ಟಕ) ನೂರು ಮತ್ತು ಹತ್ತರ ಸ್ಥಾನದಲ್ಲಿರುವ ಎಲ್ಲಾ ಅಂಕೆಗಳು ಪರಸ್ಪರ ಸಮವಾಗಿರುವ ಕಾರಣ ನಾವು ಬಿಡಿ ಸ್ಥಾನದಲ್ಲಿರುವ ಅಂಕಗಳ ಹೋಲಿಕೆ ಮಾಡಬೇಕು. ಬಿಡಿ ಸ್ಥಾನದಲ್ಲಿರುವ ಅಂಕೆಗಳಾದ 8, 1, 5, 0, 3, 6 ಇವುಗಳಲ್ಲಿ ಕನಿಷ್ಠ ಸಂಖ್ಯೆ 0, ಗರಿಷ್ಟ ಸಂಖ್ಯೆ 8 ಆಗಿರುವುದರಿಂದ ಈ ಸಂಖ್ಯೆಗಳಲ್ಲಿ ಕನಿಷ್ಠ ಸಂಖ್ಯೆ 720 ಹಾಗೂ ಗರಿಷ್ಠ ಸಂಖ್ಯೆ 728 ಎಂದು ತಿಳಿಸುವರು. ಇದೇ ರೀತಿಯಲ್ಲಿ ಮಕ್ಕಳಿಗೆ ಮಿಂಚುಪಟ್ಟಿಗಳನ್ನು ನೀಡಿ ಅವರಿಂದ ಅಭ್ಯಾಸ ಮಾಡಿಸುವರು. | | | | | |
| | 40 ನಿ | ಕೇಳಿ-ಕಲಿ ರೇಡಿಯೋ ಕಾರ್ಯಕ್ರಮವಿರುತ್ತದೆ. | | | | | | | | | |

| ನೂರು | ಹತ್ತು | ಬಿಡಿ |
|---|---|---|
| 7 | 2 | 8 |
| 7 | 2 | 1 |
| 7 | 2 | 5 |
| 7 | 2 | 0 |
| 7 | 2 | 3 |
| 7 | 2 | 6 |

| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಘಟಕ / ಉಪ ಘಟಕ | ಕಲಿಕಾ ಉದ್ದೇಶ | ಕಲಿಕೋಪಕರಣ / ಸಂಪನ್ಮೂಲಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಘಟಕ / ಉಪ ಘಟಕ | ಕಲಿಕಾ ಉದ್ದೇಶ | ಕಲಿಕೋಪಕರಣ / ಸಂಪನ್ಮೂಲಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4ನೇ ಅವಧಿ | 10 ನಿ | ಪರಿಸರ ಅಧ್ಯಯನ<br>ಪ್ರಾಣಿ ಪ್ರಪಂಚ | * ಪ್ರಾಣಿಗಳ ವಾಸಸ್ಥಳ, ಚಲನಾಂಗ, ಆಕಾರಗಳನ್ನು ಗುರುತಿಸುವರು. | * ಭೂವಾಸಿ<br>ಜಲವಾಸಿ<br>ವೃಕ್ಷವಾಸಿ<br>ಪ್ರಾಣಿಗಳ<br>ಚಿತ್ರಪಟಗಳು | ಶಿಕ್ಷಕರು | * ಈ ಹಿಂದೆ ತಿಳಿದಿರುವ ಭೂವಾಸಿ, ಜಲವಾಸಿ, ವೃಕ್ಷವಾಸಿ ಪ್ರಾಣಿಗಳ ಪಟ್ಟಿ ಮಾಡಿಸುವರು. | | | | | 5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ |
| | 30 ನಿ | | | | | ಮಕ್ಕಳಿಗೆ ಮೊದಲು ಚಿತ್ರಪಟಗಳನ್ನು ತೋರಿಸಿ ಅದರಲ್ಲಿರುವ ಪ್ರಾಣಿಗಳ ಆಕಾರಗಳನ್ನು ಗುರುತಿಸಲು ಹೇಳಿ ನಂತರ ಈ ಕೆಳಗಿನಂತೆ ಪಟ್ಟಿ ಮಾಡಿಸುವರು.<br>[ದೊಡ್ಡ ಗಾತ್ರದ ಪ್ರಾಣಿಗಳು \| ಚಿಕ್ಕ ಗಾತ್ರದ ಪ್ರಾಣಿಗಳು]<br>ಈ ರೀತಿಯಲ್ಲಿ ಪಟ್ಟಿಮಾಡಿಸಿದ ನಂತರ ಮಕ್ಕಳಿಗೆ ಪ್ರಾಣಿಗಳ ಆಕಾರಗಳ ಬಗ್ಗೆ ತಿಳಿಸುವರು. | | | | | |
| | 25 ನಿ | | | | | ಹೀಗೆ ಪ್ರಾಣಿಗಳ ಆಕಾರ, ಗಾತ್ರ ಮತ್ತು ವಾಸಸ್ಥಳ ಗಮನಿಸಿದ ಮೇಲೆ ಪುನಃ ಮತ್ತೊಮ್ಮೆ ಪಠ್ಯ ಪುಸ್ತಕದಲ್ಲಿರುವಂತಹ ಚಿತ್ರಗಳನ್ನು ಗಮನಿಸಲು ತಿಳಿಸುವರು. ಈ ಪ್ರಾಣಿಗಳಲ್ಲಿ ಹಸು, ಎಮ್ಮೆ, ಆನೆ ಇವುಗಳು ಕಾಲುಗಳಿಂದ ಮೀನುಗಳು ಈಜುರೆಕ್ಕೆಯಿಂದ, ಪಕ್ಷಿಗಳು ರೆಕ್ಕೆಯ ಸಹಾಯದಿಂದ ಚಲಿಸುತ್ತವೆ. ಹೀಗೆ ವಿವಿಧ ಪ್ರಾಣಿಗಳು ಅವುಗಳದೇ ಆದ ಚಲನಾಂಗಗಳಿಂದ ಚಲಿಸುತ್ತವೆ ಎಂದು ಅವುಗಳ ಚಲನಾಂಗಗಳ ಬಗ್ಗೆ ತಿಳಿಸುವರು. | | | | | |
| | 15 ನಿ | | | | | ಇದುವರೆಗೂ ಅಭ್ಯಾಸ ಮಾಡಿದ ನಂತರ ಮಕ್ಕಳಿಗೆ ಕೆಲವು ಪ್ರಶ್ನೆಗಳಿಂದ ಸರಳ ಮೌಲ್ಯಮಾಪನ ಮಾಡುವರು.<br>ಉದಾ : (1) ಚಿಕ್ಕ ಮತ್ತು ದೊಡ್ಡ ಗಾತ್ರದ ಪ್ರಾಣಿಗಳನ್ನು ಪಟ್ಟಿ ಮಾಡಿ?<br>(2) ಕಾಲುಗಳು, ರೆಕ್ಕೆಗಳು, ಹಾಗೂ ಸ್ನಾಯುಗಳಿಂದ ಚಲಿಸುವ ಪ್ರಾಣಿಗಳ ಪಟ್ಟಿ ಮಾಡಿರಿ? | | | | | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ ಅವಧಿ | 10 ನಿ | ಕನ್ನಡ : ನಿಯಮ ಪಾಲನೆ (ಮುಂದುವರಿದಿದೆ) | * ಪದಗಳ ನಡುವೆ ಇರುವ ಅರ್ಥಪೂರ್ಣ ಸಂಬಂಧವನ್ನು ಅರಿಯುವುದು.<br>* ರಸ್ತೆ ಚಿಹ್ನೆಗಳು ಮತ್ತು ಸೂಚನಾ ಫಲಕಗಳಲ್ಲಿನ ಸರಳ ಸೂಚನೆಗಳನ್ನು ಓದುವುದು. | | ಹಿರೇಮಣಿ | **ಪೂರ್ವ ಸಿದ್ಧತಾ ಚಟುವಟಿಕೆ**<br>ಹಿಂದಿನ ಅವಧಿಯ ಗದ್ಯಭಾಗಕ್ಕೆ ಸಂಬಂಧಿಸಿದಂತೆ ಹಿರೇಮಣಿ ಸರಳ ಪ್ರಶ್ನೆಗಳನ್ನು ಕೇಳುವರು. | ಕನ್ನಡ : ಸಂಗೊಳ್ಳಿ ರಾಯಣ್ಣ | * ನಿರರ್ಗಳವಾಗಿ ಹಾಗೂ ಸಹಜವಾಗಿ ಮಾತನಾಡುವುದು.<br>* ಸನ್ನಿವೇಶ ಹಾಗೂ ಘಟನೆಗಳನ್ನು ವಿವರಿಸುವುದು. | | ಶಿಕ್ಷಕರು | ಮೌಲ್ಯಮಾಪನ, ಚಟುವಟಿಕೆ (ಘಟಕ ಪರೀಕ್ಷೆ) |
| | 30 ನಿ | | | | ಶಿಕ್ಷಕರು | **ಕಲಿಕಾಂಶ ಚಟುವಟಿಕೆ**<br>ಮುಂದಿನ ಗದ್ಯಭಾಗ<br>"ಆಗಲೇ ತರಗತಿಗಳು ........................................<br>..........................................................................<br>......................... ಒಂದೊಂದಾಗಿ ತೋರಿಸಿದರು".<br>ಈ ಗದ್ಯಭಾಗವನ್ನು ಓದಿ ಹೇಳುವರು.<br>ಮಕ್ಕಳಿಗೆ ಬಾಯ್ದೆರೆ ಓದನ್ನು ಕೊಡುವರು. | | | ಪ್ರಶ್ನೆಪತ್ರಿಕೆ<br>ಬಿಳಿಹಾಳೆ | ಹಿರೇಮಣಿ | ಕೆಲವು ಅಭ್ಯಾಸ ಚಟುವಟಿಕೆಗಳನ್ನು ಕೊಟ್ಟು ಘಟಕ ಪರೀಕ್ಷೆ ಮಾಡುವರು. |
| | 10 ನಿ | | | | ಹಿರೇಮಣಿ | ಬಾಯ್ದೆರೆ ಓದು ಮುಂದುವರಿದಿದೆ. | | | | ಶಿಕ್ಷಕರು | ಮಕ್ಕಳು ಬರೆದ ಘಟಕ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಪಡೆಯುವರು. |
| | 30 ನಿ | | | | ಹಿರೇಮಣಿ | ಮೇಲೆ ಬೋಧಿಸಲಾದ ಗದ್ಯಭಾಗವನ್ನು ಮಕ್ಕಳು ಹಿರೇಮಣಿ ಸಹಕಾರದೊಂದಿಗೆ ತಪ್ಪಿಲ್ಲದೆ ನಕಲು ಮಾಡುವರು.<br>ಹೊಸ ಪದಗಳ ಪಟ್ಟಿ ಮಾಡುವರು. | ಜೀವನ ವಿಜ್ಞಾನ : ಭಕ್ತಿ | * ಭಕ್ತಿಯ ಪ್ರಾಮುಖ್ಯತೆಯನ್ನು ತಿಳಿಯುವರು. | ಕಥೆ ಪುಸ್ತಕಗಳು | ಶಿಕ್ಷಕರು | ಹಿಂದಿನ ಅವಧಿಯಲ್ಲಿ ಹಿರೇಮಣಿಯು ಓದಿ ಹೇಳಿದ ಕಥೆಯನ್ನು (ಭಕ್ತ ಪ್ರಹ್ಲಾದನ) ಶಿಕ್ಷಕರು ಸ್ವಾರಸ್ಯವಾಗಿ ಭಾವಾಭಿನಯದೊಂದಿಗೆ ಹೇಳುವರು.<br>ಈ ಕಥೆಯ ನೀತಿ ಸಾರವನ್ನು ತಿಳಿಸಿ ಮಕ್ಕಳಿಗೆ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ತಿಳಿಸುವರು. |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2ನೇ ಅವಧಿ | 10 ನಿ | ಗಣಿಗ : ಸಂಖ್ಯೆಗಳು | * ಕನಿಷ್ಠ – ಗರಿಷ್ಠ ಕಲ್ಪನೆ ಮೂಡಿಸುವುದು. | | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ**<br>ಕೆಲವು ಫ್ಲಾಷ್ ಕಾರ್ಡ್‌ಗಳನ್ನು ತೋರಿಸುವರು. | ಗಣಿತ : ವಿವಿಧ ಸಂಖ್ಯೆಗಳು ಮತ್ತು ಸಂಖ್ಯಾಗಣಗಳು | ಸಂಖ್ಯೆಗಳ ಮಿಂಚುಪಟ್ಟಿ ತಯಾರಿಕೆ | * ಸ್ಕೆಚ್‌ಪೆನ್<br>* ಕಾಳುಗಳು<br>* ಮಕ್ಕಳು<br>* ಗಮ್<br>* ಡ್ರಾಯಿಂಗ್ ಶೀಟ್ | ಶಿಕ್ಷಕರು | ಮಿಂಚು ಪಟ್ಟಿಯನ್ನು ತಯಾರಿಕೆಗೆ ಪೂರ್ವ ಸಿದ್ಧತೆ ಮಾಡಿಕೊಳ್ಳುವರು. |
| | 30 ನಿ | | | ಮಿಂಚು ಪಟ್ಟಿಗಳು | ಶಿಕ್ಷಕರು | ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸಿ ಅಂಕಿಗಳ ಮತ್ತು ಸಂಖ್ಯೆಗಳ ಮಿಂಚುಪಟ್ಟಿಗಳನ್ನು ಮಧ್ಯದಲ್ಲಿ ಇಟ್ಟು, ಒಂದೊಂದೇ ಮಗುವನ್ನು ಕರೆದು ಮೂರು ಮಿಂಚುಪಟ್ಟಿಗಳನ್ನು ಕೊಟ್ಟು, ಕೊಟ್ಟಿರುವ ಮಿಂಚು ಪಟ್ಟಿಗಳಲ್ಲಿ ಕನಿಷ್ಠ ಸಂಖ್ಯೆ ಮತ್ತು ಗರಿಷ್ಠ ಸಂಖ್ಯೆಗಳನ್ನು ಹೇಳುವಂತೆ ತಿಳಿಸುವರು. ಈ ಚಟುವಟಿಕೆಯನ್ನು ಎಲ್ಲ ಮಕ್ಕಳಿಂದಲೂ ಮಾಡಿಸುವರು. | | | | ಹಿರೇಮಣಿ | ಬಣ್ಣದ ಕೆ.ಜಿ. ಕಾರ್ಡ್‌ಬೋರ್ಡ್ ಹಾಳೆಗಳನ್ನು ಅನುಕೂಲಕರವಾದ ಅಳತೆಯಲ್ಲಿ ಕತ್ತರಿಸಿ ತೆಗೆದುಕೊಂಡು ಆ ಹಾಳೆಯಲ್ಲಿ ಗಮ್‌ನ ಸಹಾಯದಿಂದ ಸಂಖ್ಯೆಗಳನ್ನು ಬರೆಯುವುದು. ಅದರ ಮೇಲೆ ಮರಳು, ಮಿಂಚುವ ಕಾಗದದ ಚೂರು (ಚಮಕೀ) ಅಥವ ಕೆಲವು ಕಾಳುಗಳನ್ನು ಅಂಟಿಸುವುದು (ಕನ್ನಡ ಮತ್ತು ರೋಮನ್ ಅಂಕೆಗಳ ಆಕಾರದಲ್ಲಿ) |
| | 10 ನಿ<br>30 ನಿ | ಕನಿಷ್ಠ - ಗರಿಷ್ಠ | | | ಹಿರೇಮಣಿ | * ಶಿಕ್ಷಕರು ಕೆಲವು ಸಂಖ್ಯೆಗಳನ್ನು ಕ.ಹ. ಮೇಲೆ ಬರೆದು ಪ್ರತಿ ಮಗುವಿನಿಂದ ಒಂದು ಸಂಖ್ಯೆಯ ಹಿಂದಿನ ಮತ್ತು ಮುಂದಿನ ಸಂಖ್ಯೆಗಳನ್ನು ಹೇಳುವಂತೆ ತಿಳಿಸುವರು.<br>* ಹೇಳಿದ ಸಂಖ್ಯೆಗಳಲ್ಲಿ ಕನಿಷ್ಠ ಮತ್ತು ಗರಿಷ್ಠ ಸಂಖ್ಯೆಗಳನ್ನು ಗುರ್ತಿಸಲು ತಿಳಿಸುವರು. | ಸಾ.ಉ.ಉ.ಕಾ<br>ಮಿಂಚುಪಟ್ಟಿಗಳ ತಯಾರಿಕೆ | * ಕನ್ನಡ ಮತ್ತು ರೋಮನ್ ಅಂಕೆಗಳ ಮಿಂಚುಪಟ್ಟಿ ತಯಾರಿಕಾ ವಿಧಾನ ಅರಿಯುವುದು. | * ಕಾಳುಗಳು<br>* ಮರಳು<br>* ಮಿಂಚುವ ಚೂರುಗಳು<br>* ಫೆವಿಕಾಲ್ ಗಮ್ | ಶಿಕ್ಷಕರು | ಮಕ್ಕಳನ್ನು ಹಲವು ಗುಂಪುಗಳಾಗಿ ವಿಂಗಡಿಸಿ, ಪ್ರತಿ ಗುಂಪಿಗೆ ಗಣಿತ ಅವಧಿಯಲ್ಲಿ ತಿಳಿಸಿದ ಮಿಂಚುಪಟ್ಟಿಗಳನ್ನು ತಯಾರಿಸುವ ರೀತಿಯನ್ನು ತಿಳಿಸಿ ಕನ್ನಡ ಮತ್ತು ರೋಮನ್ ಸಂಖ್ಯಾ ಸೂಚಕಗಳನ್ನು ಗಮ್‌ನಿಂದ ಅಂದವಾಗಿ ಬರೆದು ಅವುಗಳಿಗೆ ಕಾಳು, ಮರಳು, ಮಿಂಚಿನ ಚೂರುಗಳನ್ನು ಹಾಕಿ ಅಂಟಿಸುವ ಮೂಲಕ ಹಲವಾರು ಮಿಂಚುಪಟ್ಟಿ ತಯಾರಿಸಲು ಮಾರ್ಗದರ್ಶನ ನೀಡುವರು. |

| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ ಅವಧಿ | 10 ನಿ | ಪರಿಸರ ಅಧ್ಯಯನ<br>ಪ್ರಾಣಿ ಪ್ರಪಂಚ | * ಪ್ರಾಣಿಗಳ ಆಹಾರಾಭ್ಯಾಸವನ್ನು ತಿಳಿಯುವರು. | * ವಿವಿಧ ಪ್ರಾಣಿಗಳು ತಮ್ಮ ತಮ್ಮ ಆಹಾರ ತಿನ್ನುತ್ತಿರುವ ಚಿತ್ರಪಟಗಳು<br>* ಮಿಂಚು ಪಟ್ಟಿಗಳು | ಶಿಕ್ಷಕರು | ಮೊದಲು ಈ ಹಿಂದೆ ತಿಳಿಸಿರುವಂತಹ ಚಿಕ್ಕಗಾತ್ರದ ಮತ್ತು ದೊಡ್ಡಗಾತ್ರದ ಪ್ರಾಣಿಗಳು ಮತ್ತು ಅವುಗಳ ಚಲನಾಂಗಗಳ ಬಗ್ಗೆ ಸಂಕ್ಷಿಪ್ತವಾಗಿ ಪುನರಾವರ್ತನೆ ಮಾಡುವರು. | | | | | |
| | 50 ನಿ | | | | | * ಚಿತ್ರಪಟವನ್ನು ತೋರಿಸುತ್ತಾ ನಾವು ತಿನ್ನುವ ಆಹಾರ ಯಾವುದು? ಹಾಗೂ ಚಿತ್ರದಲ್ಲಿ ಯಾವ ಯಾವ ಪ್ರಾಣಿಗಳು ಏನು ತಿನ್ನುತ್ತವೆ? ಎಂದು ಪ್ರಶ್ನಿಸುವರು.<br>ಹೀಗೆ ಪ್ರಶ್ನಿಸಿದ ನಂತರ<br>* ಸೊಪ್ಪು, ಹುಲ್ಲು ತಿನ್ನುವ ಪ್ರಾಣಿಗಳು ..................<br>* ಕಾಳು ತಿನ್ನುವ ಪ್ರಾಣಿಗಳು ...............................<br>* ಹಣ್ಣು, ಕಾಯಿ ತಿನ್ನುವ ಪ್ರಾಣಿಗಳು ......................<br>ಈ ರೀತಿ ಆಹಾರ ತಿನ್ನುವ ಪ್ರಾಣಿಗಳನ್ನು<br>* ಸಸ್ಯಾಹಾರಿಗಳು<br>* ಮಾಂಸಾಹಾರಿಗಳು<br>* ಮಿಶ್ರಾಹಾರಿಗಳು ಎಂಬುದಾಗಿ ವಿಂಗಡಿಸಿರುವುದನ್ನು ತಿಳಿಸಿ ಅವರಿಗೆ ಅವುಗಳ ವ್ಯಾಖ್ಯೆ ನೀಡಿ ಸ್ಪಷ್ಟವಾಗಿ ಅರ್ಥಗರ್ಭಿತವಾಗಿ ವಿವರಿಸುವರು. | | | | | |
| | 20 ನಿ | | | | ಶಿಕ್ಷಕರು | * ಈಗಾಗಲೇ ಕಲಿತಿರುವ ಸಾಮರ್ಥ್ಯವನ್ನು ಪರೀಕ್ಷಿಸುವ ಸಲುವಾಗಿ ಕೆಲವು ಸರಳ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು.<br>ಉದಾ : 1) ಪ್ರಾಣಿಗಳ ಹೆಸರು ತಿಳಿಸಿ ಅವುಗಳ ಆಹಾರ ಯಾವುದೆಂಬುದನ್ನು ಕೇಳುವರು?<br>2) ಮಾನವನ ಆಹಾರ ಏನು?<br>3) ಮಿಶ್ರಾಹಾರಿಗಳು ಎಂದರೇನು? ಉದಾ ಕೊಡಿ. | | | | | |

5ನೇ ತರಗತಿಯು
4ನೇ ತರಗತಿಯೊಂದಿಗೆ
ಹೊಂದಾಣಿಕೆಯಾಗಿರುತ್ತದೆ

| ಅವಧಿ | [illegible] | ಮೂರನೇ ತರಗತಿ: [illegible] | [illegible] | [illegible] | [illegible] | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: [illegible] | [illegible] | [illegible] | [illegible] | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4ನೇ ಅವಧಿ | 40 ನಿ | ಸಾ.ಉ.ಉ.ಕ<br>ಕಡ್ಡಿಗಳಿಂದ 10 ರ 100ರ ಕಟ್ಟುಗಳನ್ನು ಮಾಡುವುದು. | * 10 ಮತ್ತು 100ರ ಕಟ್ಟು ಮಾಡುವುದು | * ಕಡ್ಡಿಗಳು<br>* ದಾರ | ಶಿಕ್ಷಕರು | ಶಿಕ್ಷಕರು ಮಕ್ಕಳಿಗೆ ಸಾಕಷ್ಟು ಕಡ್ಡಿಗಳನ್ನು ಸಂಗ್ರಹಿಸಿಕೊಂಡು ತರಲು ತಿಳಿಸುವರು.<br>ಸಂಗ್ರಹಿಸಿದ ಕಡ್ಡಿಗಳನ್ನು ಸಮನಾಗಿ ಕತ್ತರಿಸಲು ಮಾರ್ಗದರ್ಶನ ಮಾಡುವರು. ಅದರಂತೆ ಮಕ್ಕಳು ಕಡ್ಡಿಗಳನ್ನು ಸಂಗ್ರಹಿಸಿ ಅವುಗಳನ್ನು ಸಮನಾಗಿ ಕತ್ತರಿಸುವರು. | | | 5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ | | |
| | 40 ನಿ | | | 10ರ ಕಟ್ಟುಗಳು<br>100 ---- | | ಮಕ್ಕಳು ಸಂಗ್ರಹಿಸಿ ಸಮನಾಗಿ ಕತ್ತರಿಸಿದ ಕಡ್ಡಿಗಳನ್ನು 10ರ ಕಟ್ಟುಗಳನ್ನು ಮಾದರಿಯಾಗಿ ಮಾಡಿ ತೋರಿಸಿ ಅದರಂತೆ 10 ಕಡ್ಡಿಗಳನ್ನು ಎಣಿಸಿ ಅದನ್ನು ಒಂದು ದಾರದಿಂದ ಕಟ್ಟುವರು.<br>ಈ ರೀತಿಯಾಗಿ ಕಟ್ಟಿದ 10ರ 10 ಕಟ್ಟುಗಳನ್ನು ಸೇರಿಸಿ 100ರ ಒಂದು ಕಟ್ಟನ್ನು ಮಾಡಿಸುವರು.<br>ಇದೇ ರೀತಿಯಾಗಿ ಸಾಧ್ಯವಾದಷ್ಟು 10ರ ನೂರರ ಕಟ್ಟುಗಳನ್ನು ಕಟ್ಟಿಸುವರು. | | | | | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಮೂರನೇ ತರಗತಿ: ಸಾಮರ್ಥ್ಯದ ವಿವರ | ಮೂರನೇ ತರಗತಿ: ಬಳಸ ಬಹುದಾದ ಕಲಿಕಾ ಸಾಮಗ್ರಿ | ಮೂರನೇ ತರಗತಿ: ನಿರ್ವಹಣೆ | ಮೂರನೇ ತರಗತಿ: ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಐದನೇ ತರಗತಿ: ಸಾಮರ್ಥ್ಯದ ವಿವರ | ಐದನೇ ತರಗತಿ: ಬಳಸ ಬಹುದಾದ ಕಲಿಕಾ ಸಾಮಗ್ರಿ | ಐದನೇ ತರಗತಿ: ನಿರ್ವಹಣೆ | ಐದನೇ ತರಗತಿ: ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ ಅವಧಿ | 10 ನಿ | ಕನ್ನಡ : ನಿಯಮ ಪಾಲನೆ | * ಪದಗಳ ನಡುವೆ ಇರುವ ಅರ್ಥಪೂರ್ಣ ಸಂಬಂಧವನ್ನು ಅರಿಯುವುದು.<br>* ರಸ್ತೆ ಚಿಹ್ನೆಗಳು ಮತ್ತು ಸೂಚನಾ ಫಲಕಗಳಲ್ಲಿನ ಸರಳ ಸೂಚನೆಗಳನ್ನು ಓದುವುದು. | | ಶಿಕ್ಷಕರು | ಈವರೆಗೆ ಬೋಧಿಸಲಾದ ಗದ್ಯಭಾಗವನ್ನು ಪ್ರತಿ ಮಗುವಿನಿಂದ ತಪ್ಪಿಲ್ಲದೆ ಓದಿಸಲು ಸೂಚನೆ ಕೊಡುವರು. | ಕನ್ನಡ : ಸಂಗೊಳ್ಳಿ ರಾಯಣ್ಣ | * ನಿರರ್ಗಳವಾಗಿ ಹಾಗೂ ಸಹಜವಾಗಿ ಮಾತನಾಡುವುದು.<br>* ಸನ್ನಿವೇಶ ಹಾಗೂ ಘಟನೆಗಳನ್ನು ವಿವರಿಸುವುದು. | * ಘಟಕ ಪರೀಕ್ಷೆ ಉತ್ತರ ಪತ್ರಿಕೆಗಳು | ಶಿಕ್ಷಕರು | **ಪರಿಹಾರ ಬೋಧನೆ**<br>ಹಿಂದಿನ ಅವಧಿಯ ಘಟಕ ಪರೀಕ್ಷೆಯಲ್ಲಿ ಗುರ್ತಿಸಲಾದ ತಪ್ಪುಗಳಿಗೆ ಪರಿಹಾರ ಬೋಧನೆ ಮಾಡುವರು. ಅದಕ್ಕೆ ತಕ್ಕಂತೆ ಚಟುವಟಿಕೆ ರೂಪಿಸುವರು.<br>ನಂತರ ಮಕ್ಕಳಿಗೆ ಸರಳ ಪ್ರಶ್ನೆಗಳನ್ನು ಕೇಳುವ ಮೂಲಕ ಪರಿಹಾರ ನೀಡುವರು. |
| | 30 ನಿ | | | ಹೊಸ ಪದಗಳ ಮಿಂಚುಪಟ್ಟಿ | ಹಿರೇಮಣಿ | ಹಿಂದಿನ ಅವಧಿಯಲ್ಲಿ ಶಿಕ್ಷಕರು ಬೋಧಿಸಲಾದ ಗದ್ಯಭಾಗವನ್ನು ಪ್ರತಿ ಮಕ್ಕಳಿಂದ ತಪ್ಪಿಲ್ಲದೆ ಸ್ಪಷ್ಟವಾಗಿ ಓದಿಸುವರು.<br>ಆಗಲೇ ತರಗತಿಗಳು ........................................ ........................................................................... .................................. ಒಂದೊಂದಾಗಿ ತೋರಿಸಿದರು. | | | | | |
| | 10 ನಿ | | | | ಹಿರೇಮಣಿ | ಮೇಲಿನ ಚಟುವಟಿಕೆ ಮುಂದುವರಿಯುವರು. | ಜೀವನ ವಿಜ್ಞಾನ : ಸಂತೋಷ | * ಮಕ್ಕಳಿಗೆ ಸಂತೋಷ ನೀಡುವ ಅವಕಾಶಗಳ ಸದ್ಬಳಕೆ | ವಿವಿಧ ರೀತಿಯ ನಗುವಿನ ಚಿತ್ರಪಟ, ಧ್ವನಿಸುರುಳಿ | ಶಿಕ್ಷಕರು | ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸುವರು. ಪ್ರತಿ ಮಗುವೂ ವೃತ್ತದ ಮಧ್ಯಕ್ಕೆ ಬಂದು ಅವರದೇ ಆದ ರೀತಿಯಲ್ಲಿ (ಮನಬಂದಂತೆ) ನಗುವರು. ಈ ರೀತಿ ಶಿಕ್ಷಕರು ಮಾರ್ಗದರ್ಶನ ನೀಡುವರು. |
| | 30 ನಿ | | | | ಶಿಕ್ಷಕರು | ಮೇಲಿನ ಚಟುವಟಿಕೆಯಲ್ಲಿ ಓದಲಾದ ಗದ್ಯಭಾಗವನ್ನು ವಿವರಣಾತ್ಮಕವಾಗಿ ಓದಿ ಹೇಳುವರು.<br>ಮಕ್ಕಳು ಗುರ್ತಿಸಲಾದ ಹೊಸ ಪದಗಳನ್ನು ಕ.ಹ. ಮೇಲೆ ಬರೆದು ಅರ್ಥ ಬರೆಯುವರು. | | | | ಹಿರೇಮಣಿ | ಶಿಕ್ಷಕರು ಹೇಳಿದ ಸೂಚನೆಯಂತೆ ಎಲ್ಲಾ ಮಕ್ಕಳಿಂದ ಈ ಚಟುವಟಿಕೆಯನ್ನು ಮುಂದುವರಿಸಿ ಮಕ್ಕಳ ಮನಸ್ಸು ಸಂತೋಷದಾಯಕವಾಗಿರುವಂತೆ ಮಾಡುವರು. |

| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2ನೇ ಅವಧಿ | 10 ನಿ | ಪರಿಸರ ಅಧ್ಯಯನ : ಪ್ರಾಣಿ ಪ್ರಪಂಚ | * ಮಾನವರಿಗೂ ಮತ್ತು ಇತರ ಪ್ರಾಣಿಗಳಿಗೂ ಇರುವ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಅರಿಯುವರು. | * ಶಿಶುಗೀತೆ ಪುಸ್ತಕ<br>* ಪ್ರಾಣಿ ಚಿತ್ರಗಳ ಮಿಂಚುಪಟ್ಟಿಗಳು | ಶಿಕ್ಷಕರು | **ಪೂರ್ವಸಿದ್ಧತಾ ಚಟುವಟಿಕೆ**<br>ಪ್ರಾಣಿಗಳಿಗೆ ಸಂಬಂಧಿಸಿದ ಒಂದು ಅಭಿನಯ ಗೀತೆಯನ್ನು ಮಕ್ಕಳಿಗೆ ಹೇಳಿಕೊಡುವರು. | ಗಣಿತ : ಸಂಖ್ಯೆಗಳು ಮತ್ತು ಸಂಖ್ಯಾ ಗಣಗಳು | * ಹಿಂದೂ ಅರೇಬಿಕ್ ಸಂಖ್ಯೆ ಮತ್ತು ರೋಮನ್ ಸಂಖ್ಯೆಗಳ ಹೋಲಿಸುವ ಸಾಮರ್ಥ್ಯ ಬೆಳೆಸುವುದು. | ಮಿಂಚುಪಟ್ಟಿಗಳು | ಹಿರೇಮಣಿ | ಮಕ್ಕಳು ತಾವು ತಯಾರಿಸಿದ ಎಲ್ಲಾ ಮಿಂಚು ಪಟ್ಟಿಗಳನ್ನು ಕನ್ನಡ ರೋಮನ್ ಸಂಖ್ಯಾ ಸೂಚಕಗಳ ಆಧಾರದ ಮೇಲೆ ವಿಂಗಡಿಸುವರು. |
| | 30 ನಿ | | | | ಹಿರೇಮಣಿ | ಎಲ್ಲಾ ಮಕ್ಕಳನ್ನೂ ವೃತ್ತಾಕಾರವಾಗಿ ಕೂರಿಸಿ, ಮಧ್ಯದಲ್ಲಿ ಪ್ರಾಣಿಗಳ ಚಿತ್ರಗಳಿರುವ ಮಿಂಚು ಪಟ್ಟಿಗಳನ್ನು ಹಾಕುವರು.<br>ಹಿರೇಮಣಿಯು ಒಂದೊಂದೇ ಮಿಂಚುಪಟ್ಟಿಯನ್ನು ತೆಗೆದುಕೊಂಡು ಒಂದೊಂದು ಮಗುವಿಗೆ ತೋರಿಸುತ್ತಾ ಇದು ಯಾವ ಪ್ರಾಣಿ? ಇದು ಆಹಾರಾಭ್ಯಾಸದ ಮೇಲೆ ಯಾವ ಗುಂಪಿಗೆ ಸೇರುತ್ತದೆ? ಎಂಬ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವ ಚಟುವಟಿಕೆ ಮಾಡಿಸುವರು. | | | ಮಿಂಚುಪಟ್ಟಿಗಳು | ಶಿಕ್ಷಕರು | ಹಿಂದಿನ ಅವಧಿಯಲ್ಲಿ ತಯಾರಿಸಿದ ಮಿಂಚುಪಟ್ಟಿಗಳನ್ನು ಉಪಯೋಗಿಸಿಕೊಂಡು ರೋಮನ್ ಮತ್ತು ಹಿಂದೂ ಅರೇಬಿಕ್ ಸಂಖ್ಯೆಗಳಿಗೆ ಹೋಲಿಕೆ ಮಾಡಿಸುವರು.<br>ಉದಾ : 2 – II, 5 – V, 10 – X |
| | 30 ನಿ | | | | ಶಿಕ್ಷಕರು | ಶಿಕ್ಷಕರು ಮಾನವನಿಗೂ ಮತ್ತು ಇತರ ಪ್ರಾಣಿಗಳಿಗೂ ಇರುವ ವ್ಯತ್ಯಾಸವನ್ನು ಪಟ್ಟಿ ಮಾಡಿಸುತ್ತಾ ಪಠ್ಯಪುಸ್ತಕದ ಪುಟಸಂಖ್ಯೆ 20 ಮತ್ತು 21ರ ವಿಷಯಗಳನ್ನು ಸ್ಪಷ್ಟವಾಗಿ ಮಕ್ಕಳಿಗೆ ಮನದಟ್ಟು ಮಾಡಿಸುವರು. | ಯೋಜನೆ : | * ಸಂಗ್ರಹಣಾ ಮನೋಭಾವ ಬೆಳೆಸುವುದು. | ಕವಿಗಳ ಚಿತ್ರಗಳು | ಹಿರೇಮಣಿ | ಹಳೆಯ ಪುಸ್ತಕಗಳು, ದಿನಪತ್ರಿಕೆಗಳಲ್ಲಿ ಜ್ಞಾನಪೀಠ ಪ್ರಶಸ್ತಿ ವಿಜೇತ ಕವಿಗಳ ಚಿತ್ರಗಳನ್ನು ಸಂಗ್ರಹಿಸಿ ಅವುಗಳನ್ನು ಉತ್ತಮವಾಗಿ ಕತ್ತರಿಸಿ ಅವುಗಳನ್ನು ಹಾಳೆಯ ಮೇಲೆ ಅಂಟಿಸಿ ಅಂಚನ್ನು ಅಂದವಾದ ಚೌಕಟ್ಟು ಗೆರೆಗಳಿಂದ ವಿನ್ಯಾಸ ಮಾಡುವರು. |
| | 10 ನಿ | | | | ಹಿರೇಮಣಿ | ಇತರ ಪ್ರಾಣಿಗಳು ಮತ್ತು ಮನುಷ್ಯನಿಗಿರುವ ವ್ಯತ್ಯಾಸಗಳನ್ನು ಪಟ್ಟಿ ಮಾಡಿಸುವನು. | | | | ಶಿಕ್ಷಕರು | ಮಕ್ಕಳು ತಯಾರಿಸಿದ ಚಿತ್ರಪಟಗಳನ್ನು ಪರಿಶೀಲಿಸುವರು. |

| ಅವಧಿ | ಸಮಯ ನಿಮಿಷ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಸಾಮರ್ಥ್ಯ | ಚಟುವಟಿಕೆಗಳು | ಬೋಧನೋಪಕರಣ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಸಾಮರ್ಥ್ಯ | ಚಟುವಟಿಕೆಗಳು | ಬೋಧನೋಪಕರಣ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ ಅವಧಿ | 40 ನಿ | ಸಾ.ಉ.ಉ.ಕಾ<br>ಕಲ್ಲುಗಳಿಗೆ ಬಣ್ಣ ಹಾಕುವುದು. | * ಕಲ್ಲುಗಳ ಸಂಗ್ರಹಿಸಿ ಅವುಗಳಿಗೆ ವಿವಿಧ ರೀತಿಯ ಬಣ್ಣ ಹಾಕುವರು. | * ಕಲ್ಲುಗಳು<br>* ವಿವಿಧ ರೀತಿಯ ಫೆವಿಕ್ರಿಲ್ ಬಣ್ಣ<br>* ಡಬ್ಬ | ಶಿಕ್ಷಕರು | ಶಿಕ್ಷಕರು ಮೊದಲು ಮಕ್ಕಳಿಂದ ಕಲ್ಲುಗಳನ್ನು ಸಂಗ್ರಹಿಸಲು ಹೇಳುವರು.<br>ನಂತರ ತರಗತಿಯಲ್ಲಿನ ಮಕ್ಕಳನ್ನು 4 ಮತ್ತು 5 ಗುಂಪುಗಳನ್ನಾಗಿ ವಿಂಗಡಿಸಿ ಒಂದೊಂದು ಗುಂಪಿಗೂ ಒಂದೊಂದು ವಿಧದ ಬಣ್ಣವನ್ನು ನೀಡಿ. ಅದರ ಜೊತೆಗೆ ಒಂದೊಂದು ಡಬ್ಬ ನೀಡುವರು. ಬಣ್ಣ ಹಾಕಿದ ನಂತರ ಒಣಗಿಸಿ ಅವರವರ ಡಬ್ಬಗಳಲ್ಲಿ ಹಾಕುವರು.<br>ಆಗ ಗಣಿತ ವಿಷಯಕ್ಕೆ ಸಂಬಂಧಿಸಿದ ಕಲಿಕಾ ಸಾಮಗ್ರಿಗಳು ತಯಾರಾಗುವವು. | | | | | |
| | 40 ನಿ | | | | | | | | | | |

5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ

ಕೇಳಿ-ಕಲಿ ರೇಡಿಯೋ ಕಾರ್ಯಕ್ರಮವಿರುತ್ತದೆ.

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಸಾಮರ್ಥ್ಯ | ಸಾಮರ್ಥ್ಯ/ಉದ್ದೇಶ | ಬೋಧನೋಪಕರಣ/ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಸಾಮರ್ಥ್ಯ | ಸಾಮರ್ಥ್ಯ/ಉದ್ದೇಶ | ಬೋಧನೋಪಕರಣ/ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4ನೇ ಅವಧಿ | 40 ನಿ | ಸಾ.ಉ.ಉ.ಕಾ ಮಿಂಚುಪಟ್ಟಿಗಳ ತಯಾರಿಕೆ | * ಸಂಖ್ಯೆಗಳ, ಅಂಕಗಳ, ಮಿಂಚುಪಟ್ಟಿಗಳನ್ನು ತಯಾರಿಸುವರು. | * ಕೆ.ಜಿ. ಕಾರ್ಡ್ ಶೀಟ್ಸ್<br>* ಮಾರ್ಕರ್ ಪೆನ್ | ಶಿಕ್ಷಕರು | ಮೊದಲು ಶಿಕ್ಷಕರು ಮಕ್ಕಳಿಗೆ ಕೆಲವು ಸೂಚನೆಗಳನ್ನು ನೀಡಿ ಆಮೇಲೆ ಮಾದರಿಯಾಗಿ ಒಂದೆರಡು ಮಿಂಚುಪಟ್ಟಿಗಳನ್ನು ಮಾಡಿ ತೋರಿಸುವರು.<br>ನಂತರ ಮಕ್ಕಳನ್ನು ಕೆಲವು ಗುಂಪುಗಳನ್ನಾಗಿ ಮಾಡಿ ಅವರಿಗೆ ಯಾವ ಯಾವ ಅಂಕೆಗಳು ಮತ್ತು ಸಂಖ್ಯೆಗಳ ಮಿಂಚುಪಟ್ಟಿಗಳನ್ನು ಮಾಡಬೇಕೆಂಬುದನ್ನು ತಿಳಿಸಿ ಮಿಂಚುಪಟ್ಟಿಗಳನ್ನು ತಯಾರಿಸುವರು. | 5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ | | | | |
| | 40 ನಿ | ಮೌಲ್ಯಶಿಕ್ಷಣ ನೀತಿ ವಾಕ್ಯಗಳು | * ಮಕ್ಕಳಿಗೆ ತಿಳಿದಿರುವ ಸುಲಭ ಹಾಗೂ ಸರಳವಾದ ನೀತಿ ವಾಕ್ಯಗಳನ್ನು ಹೇಳಿಸುವುದು. | * ನೀತಿ ವಾಕ್ಯಗಳನ್ನು ಬರೆದಿರುವ ಮಿಂಚುಪಟ್ಟಿಗಳು | ಶಿಕ್ಷಕರು | ಶಿಕ್ಷಕರು ಮೊದಲು ಮಕ್ಕಳಿಗೆ ಒಂದೆರಡು ನೀತಿ ವಾಕ್ಯಗಳನ್ನು ಮಾದರಿಯಾಗಿ ಹೇಳುವರು.<br>* ಮನೆಯೇ ಮೊದಲ ಪಾಠಶಾಲೆ.<br>* ಮಾಡಿದ್ದುಣ್ಣೋ ಮಹಾರಾಯ.<br>ಹೀಗೆ ಪ್ರತಿ ಮಕ್ಕಳಿಂದ ಅವರಿಗೆ ತಿಳಿದಿರುವಂತಹ ಸರಳ, ಸುಲಭ ನೀತಿ ವಾಕ್ಯಗಳನ್ನು ಹೇಳಿಸಿ ನಂತರ ಅವರಿಗೆ ನೀತಿಯ ಮಹತ್ವದ ಅರಿವು ಮೂಡಿಸುವರು. | | | | | |
| 1ನೇ ಅವಧಿ | ದಿನ - 24<br>40 ನಿಮಿಷ | | | | | ----------- 1ನೇ ತರಗತಿಯಿಂದ 5ನೇ ತರಗತಿಯವರೆಗೆ ಸಾಮೂಹಿಕ ಕವಾಯಿತು ----------- | | | | | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯಗಳು | ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯಗಳು | ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2ನೇ ಅವಧಿ | 10 ನಿ | ಕನ್ನಡ : ನಯನ ಜಾಲಿ (ಮುಂದುವರಿದ) | * ಪದಗಳ ನಡುವೆ ಇರುವ ಅರ್ಥಪೂರ್ಣ ಸಂಬಂಧವನ್ನು ಅರಿಯುವರು.<br>* ರಸ್ತೆ ಚಿಹ್ನೆಗಳು ಮತ್ತು ಸೂಚನಾ ಫಲಕಗಳಲ್ಲಿನ ಸರಳ ಸೂಚನೆಗಳನ್ನು ಓದುವರು. | ಹಾಡಿನ ಪುಸ್ತಕ | ಶಿಕ್ಷಕರು | 5ನೇ ತರಗತಿಯ ಚಟುವಟಿಕೆಯಲ್ಲಿ ಭಾಗವಹಿಸುವರು. | ಕನ್ನಡ<br>ಮಲೆನಾಡ ಸಿರಿ : ಗದ್ಯಪಾಠ | * ಅಪರಿಚಿತ ಸನ್ನಿವೇಶಗಳಲ್ಲಿ ಸಂಭಾಷಣೆ, ಸಂವಾದ ಚಟುವಟಿಕೆಗಳ ಮೂಲಕ ಅರ್ಥಮಾಡಿಕೊಳ್ಳುವರು.<br>* ಸನ್ನಿವೇಶ ಮತ್ತು ಘಟನೆಗಳನ್ನು ವಿವರಿಸುವರು.<br>* ಲೇಖನ ಚಿಹ್ನೆಗಳನ್ನು ವಾಕ್ಯಗಳಲ್ಲಿ ಬಳಸುವರು. | ಹಾಡಿನ ಪುಸ್ತಕ | ಶಿಕ್ಷಕರು | **ಪೂರ್ವಸಿದ್ಧತಾ ಚಟುವಟಿಕೆ**<br>ಮಕ್ಕಳಿಗೆ "ಜೋಗದ ಸಿರಿ ಬೆಳಕಿನಲ್ಲಿ" ............. ಈ ಹಾಡನ್ನು ಅಭಿನಯದೊಂದಿಗೆ ಹೇಳಿಕೊಡುವರು. |
| | 30 ನಿ | | | | ಹಿರೇಮಣಿ | ಮಕ್ಕಳಿಗೆ ಗದ್ಯದಲ್ಲಿ ಬರುವ ರಾಧ, ರವಿ, ಗುರುಗಳು ಸುಮ ಮುಂತಾದ ಪಾತ್ರಗಳನ್ನು ಮಕ್ಕಳಿಗೆ ಸಂಖ್ಯೆಗನುಗುಣವಾಗಿ ಗುಂಪು ಮಾಡಿ ಹಂಚಿಕೆ ಮಾಡಿ ಪಠ್ಯದಲ್ಲಿರುವ ಆಯಾ ಪಾತ್ರಗಳ ಮಾತುಗಳನ್ನು ಬಾಯಿಪಾಠ ಮಾಡುವಂತೆ ತಿಳಿಸುವರು.<br>ಮಕ್ಕಳು ಬಾಯಿ ಪಾಠ ಮಾಡುವರು. | | | ಮಲೆನಾಡಿನ ಚಿತ್ರಪಟ | ಶಿಕ್ಷಕರು | **ಮಲೆನಾಡ ಸಿರಿ**<br>ರಮೇಶ : ಮೇಡಂ ಅಲ್ಲಿ ಕಾಣಿಸುತ್ತಿರುವ ................................ ................................................................................ ................................... ಅದನ್ನು ನಿಮಗೆ ತೋರಿಸುತ್ತೇನೆ.<br>ಈ ಗದ್ಯಭಾಗವನ್ನು ಓದುವರು. ನಂತರ ಮಕ್ಕಳಿಗೆ ಮೌನ ಓದನ್ನು ಕೊಡುವರು. |
| | 10 ನಿ | | | | ಹಿರೇಮಣಿ | ಮೇಲಿನ ಚಟುವಟಿಕೆ ಮುಂದುವರಿಯುವುದು. | ಗಣಿತ<br>ವಿವಿಧ ಸಂಖ್ಯೆಗಳು ಮತ್ತು ಸಂಖ್ಯಾಗಣಗಳು | * ಹಿಂದೂ ಅರೇಬಿಕ್ ಸಂಖ್ಯೆ ಮತ್ತು ಕನ್ನಡ ಸಂಖ್ಯೆಗಳಿಗೆ ಹೋಲಿಸುವ ಸಾಮರ್ಥ್ಯ ಬೆಳೆಸುವರು. | | ಶಿಕ್ಷಕರು | ಶಿಕ್ಷಕರು ಈ ಕೆಳಕಂಡಂತೆ ಸೂಚನೆ ನೀಡುವರು. |
| | 30 ನಿ | | | | ಶಿಕ್ಷಕರು | ಮಕ್ಕಳು ಅಭ್ಯಾಸ ಮಾಡಿದ ಗದ್ಯಭಾಗವನ್ನು ನಾಟಕದ ರೀತಿಯಲ್ಲಿ ಎಲ್ಲ ತಂಡಗಳಿಂದ ಅಭಿನಯಿಸುವಂತೆ ತಿಳಿಸುವರು.<br>ಉತ್ತಮವಾಗಿ ಅಭಿನಯಿಸಿದ ತಂಡವನ್ನು ಹೊಗಳುವುದು. | | | ಹಿಂದೂ ಅರೇಬಿಕ್ ಮತ್ತು ಕನ್ನಡ ಅಂಕೆ ಸಂಖ್ಯೆಗಳ ಮಿಂಚು ಪಟ್ಟಿಗಳು | ಹಿರೇಮಣಿ | ಹಿಂದಿನ ಅವಧಿಯಲ್ಲಿ ಹಿಂದೂ ಅರೇಬಿಕ್ ಸಂಖ್ಯೆಗಳಿಗೆ ರೋಮನ್ ಸಂಖ್ಯೆಗಳನ್ನು ಹೋಲಿಸಿದಂತೆ ಈ ಅವಧಿಯಲ್ಲಿ ಹಿಂದೂ ಅರೇಬಿಕ್ ಸಂಖ್ಯೆಗೆ ಕನ್ನಡ ಸಂಖ್ಯೆಗಳನ್ನು ಹೋಲಿಸುವರು.<br>ಉದಾ : 7 ೭<br>9 ೯<br>1 ೧ |

| [illegible] | [illegible] | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | [illegible] | [illegible] | [illegible] | [illegible] | ಕಲಿಕಾ ಪ್ರಕ್ರಿಯೆ | [illegible] | [illegible] | [illegible] | [illegible] | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ ಅವಧಿ | 20 ನಿ<br><br>60 ನಿ | ಸಾ.ಉ.ಕಾ ಕ್ಯಾಲೆಂಡರ್ ತಯಾರಿ | * ಮಕ್ಕಳು ಕ್ಯಾಲೆಂಡರ್ ತಯಾರಿ ಮಾಡುವರು. | * ಡ್ರಾಯಿಂಗ್ ಹಾಳೆ<br>* ಸ್ಕೆಚ್‌ಪೆನ್<br>* ಹಳೆ ಕ್ಯಾಲೆಂಡರ್<br>* ಕತ್ತರಿ<br>* ಸಂಖ್ಯೆ ಮತ್ತು ತಿಂಗಳ ಹೆಸರಿನ ಕಟಿಂಗ್<br>* ಗೋಂದು | ಶಿಕ್ಷಕರು | ಮಕ್ಕಳನ್ನು ಅವರ ಸಂಖ್ಯೆಗನುಗುಣವಾಗಿ 12 ಗುಂಪುಗಳಾಗಿ ವಿಂಗಡಿಸುವರು.<br>ಹಳೆಯ ಕ್ಯಾಲೆಂಡರಿನಿಂದ ಕತ್ತರಿಸಿದ ಸಂಖ್ಯೆಗಳನ್ನು (1 ರಿಂದ 31ವರೆಗಿನ –12 ಸೆಟ್) ಮಕ್ಕಳ ಗುಂಪುಗಳಿಗೆ ವಿತರಿಸುವುದು. ನಂತರ ಮಕ್ಕಳಿಗೆ ಪ್ರತಿ ತಿಂಗಳಿನ ಕೋಷ್ಟಕ ಹಾಕಿದ ಡ್ರಾಯಿಂಗ್ ಹಾಳೆಗಳನ್ನು ನೀಡಿ ಪ್ರತಿ ಗುಂಪಿಗೆ ತಾವು ರಚಿಸಬೇಕಾದ ತಿಂಗಳ ಹೆಸರನ್ನು ತಲೆಬರಹದಲ್ಲಿ ಬರೆಯಲು ಹೇಳುವರು ನಂತರ ಶಿಕ್ಷಕರು ಪ್ರತಿ ಗುಂಪಿಗೆ ತಾವು ಯಾವ ವಾರದಿಂದ ಪ್ರಾರಂಭಿಸಬೇಕೆಂಬ ನಿರ್ದಿಷ್ಟ ಸೂಚನೆ ನೀಡಿ ಮುಂದೆ ಕ್ರಮಾನುಗತ ಸಂಖ್ಯೆಗಳನ್ನು ಅಂಟಿಸುತ್ತಾ ಹೋಗಲು ಹೇಳುವರು. (ಪ್ರತಿ ತಿಂಗಳಿನಲ್ಲಿ ಎಷ್ಟು ದಿನಗಳಿವೆ ಎಂಬ ಸೂಚನೆಯನ್ನು ಶಿಕ್ಷಕರು ಮೊದಲೇ ಗುಂಪುಗಳಿಗೆ ನೀಡಿರಬೇಕು).<br>ನಂತರ ತಿಂಗಳಿಗೆ ಅನುಗುಣವಾಗಿ ಎಲ್ಲಾ ಡ್ರಾಯಿಂಗ್ ಹಾಳೆ ಸಂಗ್ರಹಿಸಿ ಹೊಲೆದು ಅವಶ್ಯಕ ತಲೆಬರಹಗಳನ್ನು ಅಂದವಾಗಿ ಬರೆಯುವರು. | | | 4ನೇ ತರಗತಿಯೊಂದಿಗೆ ಹೊಂದಾಣಿಕೆ ಮಾಡಲಾಗಿದೆ. | | |

| ಜೂನ್ | | | | | | |
|---|---|---|---|---|---|---|
| ಭಾನು | | | | | | |
| ಸೋಮ | | | | | | |
| ಮಂಗಳ | | | | | | |
| ಬುಧ | | | | | | |
| ಗುರು | | | | | | |
| ಶುಕ್ರ | | | | | | |
| ಶನಿ | | | | | | |

ಇದೇ ರೀತಿ ಹನ್ನೆರಡು ತಿಂಗಳುಗಳ ಹಾಳೆಗಳನ್ನು ತಯಾರಿಸಿ ನಂತರ ನೀಟಾಗಿ ಹೊಲಿದು ಕ್ಯಾಲೆಂಡರ್ ತಯಾರು ಮಾಡುವರು.

| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ ಅವಧಿ | 10 ನಿ | ಕನ್ನಡ<br>ನಿಯಮ ಪಾಲನೆ | * ಪದಗಳ ನಡುವೆ ಇರುವ ಅರ್ಥಪೂರ್ಣ ಸಂಬಂಧವನ್ನು ಅರಿಯುವುದು.<br>* ರಸ್ತೆ ಚಿನ್ಹೆಗಳು ಮತ್ತು ಸೂಚನಾ ಫಲಕಗಳಲ್ಲಿನ ಸರಳ ಸೂಚನೆಗಳನ್ನು ಓದುವುದು. | ರಸ್ತೆ ನಿಯಮಗಳ ಚಿತ್ರಪಟಗಳು | ಶಿಕ್ಷಕರು | **ಪೂರ್ವಸಿದ್ಧತಾ ಚಟುವಟಿಕೆ**<br>3ನೇ ತರಗತಿಯ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. | ಕನ್ನಡ<br>ಮಲೆನಾಡ ಸಿರಿ | * ಅಪರಿಚಿತ ಸನ್ನಿವೇಶಗಳನ್ನು ಸಂಭಾಷಣೆ, ಸಂವಾದ, ಚರ್ಚೆಗಳ ಮೂಲಕ ಅರ್ಥಮಾಡಿಕೊಳ್ಳುವುದು.<br>* ಸನ್ನಿವೇಶ ಮತ್ತು ಘಟನೆಗಳನ್ನು ವಿವರಿಸುವುದು.<br>* ಲೇಖನ ಚಿನ್ಹೆಗಳನ್ನು ವಾಕ್ಯಗಳಲ್ಲಿ ಬಳಸುವುದು. | ಜಾತ್ರೆ ಸನ್ನಿವೇಶದ ಚಿತ್ರ ಪಟದ ಪ್ರದರ್ಶನ | ಶಿಕ್ಷಕರು | **ಪೂರ್ವಸಿದ್ಧತಾ ಚಟುವಟಿಕೆ**<br>ಜಾತ್ರೆ ಸನ್ನಿವೇಶದ ರೂಪಕವನ್ನು ಏರ್ಪಡಿಸುವರು.<br>ಹಣ್ಣು ಮಾರುವವ, ಆಟಿಕೆ ಮಾರುವವನು, ತಿಂಡಿ ಮಾರುವವನು, ಐಸ್ ಮಾರುವವನು, ದೇವಾಲಯದಲ್ಲಿ ಪೂಜಾರಿ ಪೂಜೆ ಮಾಡುವುದು. ಇತ್ಯಾದಿ ಸನ್ನಿವೇಶಗಳ ರೂಪಕ ಏರ್ಪಡಿಸುವರು. |
| | 30 ನಿ | | | | ಶಿಕ್ಷಕರು | "ಮಕ್ಕಳೇ ರಸ್ತೆ ದಾಟುವಾಗ ....................................<br>...........................................................................<br>........................................................ ರಸ್ತೆ ದಾಟಲು ಸುರಕ್ಷಿತ ಸ್ಥಳ". ಈ ಗದ್ಯಭಾಗವನ್ನು ಸ್ವರಭಾರ ಏರಿಳಿತ ದೊಂದಿಗೆ ಓದುವರು. ಮಕ್ಕಳು ಆಲಿಸುವರು. ನಂತರ ಮೌನ ಓದನ್ನು ನೀಡುವರು. | | | ದೇವಸ್ಥಾನದ ಚಿತ್ರಪಟ | ಹಿರೇಮಣಿ | **ಅಭ್ಯಾಸ ಚಟುವಟಿಕೆ**<br>ರಮೇಶ್ : ಮೇಡಂ ಅಲ್ಲಿ ಕಾಣಿಸುತ್ತಿರುವ ................................<br>...........................................................................<br>.................................... ಅದನ್ನು ನಿಮಗೆ ತೋರಿಸುತ್ತೇನೆ.<br>ಈವರೆಗಿನ ಗದ್ಯಭಾಗವನ್ನು ಲೇಖನ ಚಿನ್ಹೆಗಳ ಸಹಿತವಾಗಿ ಸ್ಪಷ್ಟವಾಗಿ ಅಂದವಾಗಿ ತಪ್ಪಿಲ್ಲದೆ ಬರೆಯಲು ತಿಳಿಸುವರು. |
| | 30 ನಿ | | | | ಹಿರೇಮಣಿ | ಬಾಯ್ದೆರೆ ಓದನ್ನು ಹಿರೇಮಣಿ ಮುಂದುವರಿಸಲು. ಶಿಕ್ಷಕರು ಸೂಚನೆ ನೀಡುವರು. | | | | ಶಿಕ್ಷಕರರು | **ಕಲಿಕಾ ಚಟುವಟಿಕೆ**<br>ರಮೇಶ್ : "ಮೇಡಂ ಅಲ್ಲಿ ಕಾಣಿಸುತ್ತಿರುವ ................................<br>...........................................................................<br>.................................... ಅದನ್ನು ನಿಮಗೆ ತೋರಿಸುತ್ತೇನೆ."<br>ಎಂಬ ಗದ್ಯಭಾಗವನ್ನು ವಿವರಿಸುತ್ತಾ ಓದುವರು. ಮಕ್ಕಳು ಮೌನ ಓದಿನ ಸಮಯದಲ್ಲಿ ಪಟ್ಟಿ ಮಾಡಿದ ಪದಗಳಿಗೆ ಅರ್ಥ ತಿಳಿಸುವರು. |
| | 10 ನಿ | | | | ಶಿಕ್ಷಕರು | ಈ ಗದ್ಯಭಾಗದಲ್ಲಿ ಬರುವ ಪಾತ್ರಗಳನ್ನು ಹಂಚಿಕೆ ಮಾಡುವರು. ನಂತರ ತಮ್ಮ ತಮ್ಮ ಮಾತುಗಳನ್ನು ಬಾಯಿಪಾಠ ಮಾಡಲು ತಿಳಿಸುವರು. | | | | ಹಿರೇಮಣಿ | ಗದ್ಯಭಾಗದ ಬಾಯ್ದೆರೆ ಓದಿಗೆ ಅವಕಾಶ ನೀಡುವರು. |

| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2ನೇ ಅವಧಿ | 10 ನಿ | ಜೀವನ ವಿಜ್ಞಾನ – ದಯೆ | * ಮಕ್ಕಳಲ್ಲಿ ದಯೆಯ ಬಗ್ಗೆ ಕಲ್ಪನೆ ಮೂಡಿಸುವುದು ಹಾಗೂ ದಯೆಯ ಮನೋಭಾವನೆ ಮೂಡಿಸುವುದು. | ಕಥೆ–ಪುಸ್ತಕಗಳು | ಹಿರೇಮಣಿ | ದಯೆಯನ್ನು ಪ್ರೇರೇಪಿಸುವ ಕಥೆಗಳನ್ನು ನೆನಪಿಸಿಕೊಳ್ಳಲು ತಿಳಿಸುವರು. | ವಿಷಯ : ವಿವಿಧ ಸಂಖ್ಯೆಗಳು ಮತ್ತು ಸಂಖ್ಯಾಗಣಗಳು | * ಗಣದ ಕಲ್ಪನೆಯನ್ನು ಮೂಡಿಸುವುದು. | | ಶಿಕ್ಷಕರು | ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ ಅವರು ಧರಿಸಿರುವ ಬಟ್ಟೆಯ ಬಣ್ಣಗಳ ಆಧಾರದಿಂದ ಗುಂಪು ಮಾಡಲು ತಿಳಿಸುವರು. ಇದೇ ರೀತಿಯಾಗಿ ಹುಡುಗ, ಹುಡುಗಿಯರ ಗುಂಪು ಇತ್ಯಾದಿ ಮಾಡಿಸುವರು. |
| | 30 ನಿ | | | ಗ್ರಂಥಾಲಯದ ಪುಸ್ತಕ | ಹಿರೇಮಣಿ | ಗ್ರಂಥಾಲಯದ ಪುಸ್ತಕಗಳನ್ನು ಮಕ್ಕಳಿಗೆ ಕೊಟ್ಟು ಅವುಗಳಲ್ಲಿರುವ ದಯೆ ವಿಷಯಕ್ಕೆ ಸಂಬಂಧಿಸಿದ ಕಥೆಗಳನ್ನು ಆರಿಸಿ ತೆಗೆಯಲು ತಿಳಿಸುವರು. | | | | ಶಿಕ್ಷಕರು | ಒಂದೇ ರೀತಿಯ ಸಾಮಾನ್ಯ ಗುಣಲಕ್ಷಣಗಳನ್ನು ಹೊಂದಿರುವ ವಸ್ತುಗಳ ಗುಂಪಿಗೆ ಗಣ ಎನ್ನುತ್ತಾರೆ ಎಂದು ಹಲವಾರು ಉದಾಹರಣೆಗಳ ಮೂಲಕ ತಿಳಿಸುವರು.<br>ಉದಾ : 1) ಕನ್ನಡ ಸಂಖ್ಯೆಗಳ ಗಣ<br>2) ಹಿಂದೂ ಅರೇಬಿಕ್ ಸಂಖ್ಯೆಗಳ ಗಣ<br>3) ರೋಮನ್ ಅಂಕೆಗಳ ಗಣ<br>4) ಸರಿ ಸಂಖ್ಯೆಗಳ ಗಣ<br>5) ಬೆಸ ಸಂಖ್ಯೆಗಳ ಗಣ<br>ಇತ್ಯಾದಿ ಉದಾಹರಣೆಗಳೊಂದಿಗೆ ಗಣದ ಕಲ್ಪನೆಯನ್ನು ಮೂಡಿಸುವರು.<br>ನಂತರ ಮಕ್ಕಳಿಗೆ ಗೊತ್ತಿರುವ ಗಣಗಳ ಪಟ್ಟಿ ಮಾಡಲು ತಿಳಿಸುವರು. |
| | 40 ನಿ | | | | ಶಿಕ್ಷಕರು | ಶಿಕ್ಷಕರು 'ದಯೆ' ಮನೋಭಾವನೆಯನ್ನು ಪ್ರೇರೇಪಿಸುವ ಸೂಕ್ತ ಕಥೆಯನ್ನು ಆಯ್ಕೆ ಮಾಡಿಕೊಂಡು ಮಕ್ಕಳಿಗೆ ಹೇಳುವರು. | ಕೇಳಿ ಕಲಿ | | | ಹಿರೇಮಣಿ | ಕೇಳಿ-ಕಲಿ ಪಾಠವನ್ನು ಕೇಳಿಸುವುದು |

| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ ಅವಧಿ | 20 ನಿ | ಗಣಿತ : ಪೂರ್ಣಾಂಕಗಳು ಮತ್ತು ಸಂಖ್ಯಾ ಸೂಚಕಗಳು (ಏರಿಕೆ–ಇಳಿಕೆ) | * ಕೊಟ್ಟಿರುವ ಸಂಖ್ಯಾ ಸೂಚಕಗಳನ್ನು ಏರಿಕೆ ಹಾಗೂ ಇಳಿಕೆ ಕ್ರಮದಲ್ಲಿ ಜೋಡಿಸುವುದು. | ಮಕ್ಕಳು | ಶಿಕ್ಷಕರು | **ಎಷ್ಟಪ್ಪ ಎಷ್ಟು ಚಟುವಟಿಕೆ**<br>ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ ಶಿಕ್ಷಕರು ಎಷ್ಟಪ್ಪಾ ಎಷ್ಟು ಎಂದು ಕೇಳಿದಾಗ ಮಕ್ಕಳು ನೀವು ಹೇಳಿದಷ್ಟು ಎಂದು ಹೇಳುವರು ಆಗ ಯಾವುದಾದರೂ ಒಂದು ಸಂಖ್ಯೆ (5) ಹೇಳುವರು. ಆಗ 5 ಜನರ ಗುಂಪು ಮಾಡುವರು. ಗುಂಪಿನಲ್ಲಿಲ್ಲದೆ ಉಳಿಯುವವರು ಸೋತಂತೆ. ಹೀಗೆ ಆಟ ಮುಂದುವರೆಸುವರು. | | | | | 5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ |
| | 40 ನಿ | | | * ಸಂಖ್ಯೆಗಳ ಮಿಂಚು ಪಟ್ಟಿಗಳು | ಸ್ವಕಲಿಕೆ | * ಈಗಾಗಲೇ ಕನಿಷ್ಠ–ಗರಿಷ್ಠ ಸಂಖ್ಯೆ ತಿಳಿದಿರುವುದರಿಂದ ನಾವು ಕೆಲವು ಸಂಖ್ಯೆಗಳನ್ನು ನೀಡಿ ಗಮನಿಸಲು ಹೇಳುವುದು.<br>128, 700, 678, 516, 973, 299. ಮೊದಲು ನಾವು ನೂರರ ಸ್ಥಾನದ ಅಂಕೆಗಳಾದ 1, 7, 6, 5, 9, 2 ಗಳನ್ನು ಏರಿಕೆ ಕ್ರಮದಲ್ಲಿ ಬರೆದಾಗ 1, 2, 5, 6, 7, 9 ಆಗುವುದು. [128, 299, 516, 678, 700, 973] ಇದನ್ನೇ ಇಳಿಕೆ ಕ್ರಮದಲ್ಲಿ ಬರೆಯುವುದು. [973, 700, 678, 516, 299, 128] ಇದೇ ಸಂಖ್ಯೆಗಳನ್ನು ಮಕ್ಕಳಿಗೆ ನೀಡಿ ಅವರ ಎತ್ತರಕ್ಕನು ಗುಣವಾಗಿ ನಿಲ್ಲಿಸಿ ಮಕ್ಕಳಿಗೆ ಅರ್ಥೈಸುವರು. | | | | | |
| | 20 ನಿ | | | | | ಪುನಃ ಮಕ್ಕಳಿಗೆ ಮತ್ತೆ ಕೆಲವು ಸಂಖ್ಯೆಗಳನ್ನು ನೀಡಿ ಗಮನಿಸಲು ಹೇಳುವುದು. 208, 203, 201, 205, 207, 200.<br>ಇಲ್ಲಿ ನಾವು ನೂರರ ಸ್ಥಾನದಲ್ಲಿ 2 ಮತ್ತು ಹತ್ತರ ಸ್ಥಾನದಲ್ಲಿ 0 ಇರುವುದನ್ನು ತಿಳಿಸಿ ಬಿಡಿಸ್ಥಾನ ದಲ್ಲಿರುವ 8, 3, 1, 5, 7, 0 ಗಳನ್ನು ಇಳಿಕೆ ಕ್ರಮದಲ್ಲಿ ಬರೆದಾಗ 8, 7, 5, 3, 1, 0 ಆಗುವುದು ಇದರ ಸಹಾಯ ದಿಂದ ಆ ಸಂಖ್ಯೆಗಳನ್ನು ಇಳಿಕೆ ಕ್ರಮದಲ್ಲಿ ಬರೆದಾಗ [208, 207, 205, 203, 201, 200] ಆಗುತ್ತದೆಂಬುದನ್ನು ತಿಳಿಸಿಕೊಡುವರು. | | | | | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4ನೇ ಅವಧಿ | 10 ನಿ | ಪರಿಸರ ಅಧ್ಯಯನ<br>ಪ್ರಾಣಿ ಪ್ರಪಂಚ | * ಪ್ರಾಣಿಗಳ ವಾಸಸ್ಥಳ ದೇಹದಗಾತ್ರ ಆಕಾರಗಳನ್ನು ಗುರುತಿಸುವರು.<br>* ಪ್ರಾಣಿಗಳ ಆಹಾರಭ್ಯಾಸವನ್ನು ತಿಳಿಯುವರು. * ಪ್ರಾಣಿಗಳನ್ನು ಆಹಾರಭ್ಯಾಸದ ಆಧಾರದ ಮೇಲೆ ವಿಂಗಡಿಸುವುದು.<br>* ಮಾನವರಿಗೂ ಇತರ ಪ್ರಾಣಿಗಳಿಗೂ ಇರುವ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಅರಿಯುವರು. | | ಶಿಕ್ಷಕರು | ಈಗಾಗಲೇ ಕಲಿತಿರುವ ಅಧ್ಯಾಯದ ಮುಖ್ಯಾಂಶಗಳ ಸಂಕ್ಷಿಪ್ತವಾದ ಪರಿಚಯ ಮಾಡಿಕೊಳ್ಳುವರು. | 5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ | | | | |
| | 50 ನಿ | | | | ಶಿಕ್ಷಕರು | * ಪಠ್ಯಪುಸ್ತಕದಲ್ಲಿರುವಂತಹ ಪುಟ ಸಂಖ್ಯೆ 22, 23ರಲ್ಲಿರುವ ಈ ಪ್ರಶ್ನೆಗಳಿಗೆ ಉತ್ತರಿಸು.<br>– ಇವು ಯಾವ ಪ್ರಾಣಿಯ ದೇಹದ ಭಾಗಗಳು ಹೆಸರಿಸಿ.<br>– ಬಿಟ್ಟ ಸ್ಥಳವನ್ನು ಸೂಕ್ತ ಪದದಿಂದ ತುಂಬಿರಿ.<br>– ವಿಂಗಡಿಸಿ ಬರೆಯಿರಿ.<br>– ಕೊಟ್ಟಿರುವ ಆಹಾರಭ್ಯಾಸದ ಮಿಂಚುಪಟ್ಟಿಗಳನ್ನು ವಿಂಗಡಿಸಿ ಆ ಗುಂಪುಗಳಿಗೆ ಹೆಸರು ನೀಡುವರು. | | | | | |
| | 20 ನಿ | | | | ಶಿಕ್ಷಕರು | ಪಠ್ಯಪುಸ್ತಕದಲ್ಲಿರುವಂತಹ ಆಟ ಆಡು ಚಟುವಟಿಕೆಯನ್ನು ಪ್ರತಿ ಮಕ್ಕಳಿಂದ ಆಡಿಸುವರು. (ಪುಟ ಸಂಖ್ಯೆ – 24). | | | | | |

| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **1ನೇ ಅವಧಿ** | 10 ನಿ | **ಕನ್ನಡ : ನಿಯಮ ಪಾಲನೆ** | * ಪದಗಳ ನಡುವೆ ಇರುವ ಅರ್ಥಪೂರ್ಣ ಸಂಬಂಧವನ್ನು ಅರಿಯುವುದು.<br>* ರಸ್ತೆ ಚಿಹ್ನೆಗಳು ಮತ್ತು ಸೂಚನಾ ಫಲಕಗಳಲ್ಲಿನ ಸರಳ ಸೂಚನೆಗಳನ್ನು ಓದುವುದು. | | ಹಿರೇಮಣಿ | ಹಿಂದಿನ ಅವಧಿಯಲ್ಲಿ ಬೋಧಿಸಲಾದ ಗದ್ಯ ಭಾಗವನ್ನು ಹಿರೇಮಣಿ ಎಲ್ಲ ಮಕ್ಕಳಿಂದಲೂ ಓದಿಸುವರು. | | | | ಶಿಕ್ಷಕರು | ಗ್ರಂಥಾಲಯದಲ್ಲಿರುವ ಪುಸ್ತಕಗಳನ್ನು ಪ್ರತಿ ಮಕ್ಕಳಿಗೂ ವಿತರಿಸಿ ಓದಲು ಸೂಚಿಸುವುದು. |
| | 30 ನಿ | | | * ರಸ್ತೆ ಸೂಚನಾ ಫಲಕಗಳ ಮಾದರಿಗಳು | ಶಿಕ್ಷಕರು | ಹಿಂದಿನ ಅವಧಿಯಲ್ಲಿ ಬೋಧಿಸಲಾದ ಗದ್ಯಭಾಗ ವನ್ನು ವಿವರಣಾತ್ಮಕವಾಗಿ ಶಿಕ್ಷಕರು ಓದಿ ಹೇಳುವರು. ಈ ಸಮಯದಲ್ಲಿ ರಸ್ತೆಯ ಸಂಚಾರಿ ಸೂಚನಾ ಫಲಕದ ಮಾದರಿಗಳನ್ನು ಪ್ರದರ್ಶಿಸುತ್ತಾ ಸಂಚಾರಿ ನಿಯಮಗಳನ್ನು ತಿಳಿಸುವರು. | **ಜೀವನ ವಿಜ್ಞಾನ : ಏಕಾಗ್ರತೆ** | * ಏಕಾಗ್ರತೆ ಬೆಳೆಸುವುದು. | ದಿನನಿತ್ಯದ ಬಳಕೆಯಲ್ಲಿರುವ 10ರಿಂದ 15 ವಸ್ತುಗಳು | ಹಿರೇಮಣಿ | ದಿನ ನಿತ್ಯದ ಬಳಕೆಯಲ್ಲಿರುವ 10 ರಿಂದ 15 ವಸ್ತುಗಳನ್ನು ಮೇಜಿನ ಮೇಲೆ ಜೋಡಿಸಿ ಅವುಗಳನ್ನು ಕೊಟ್ಟಿರುವ ಕಾಲಾವಕಾಶದಲ್ಲಿ ವೀಕ್ಷಿಸಿ ನಂತರ ಅವುಗಳನ್ನು ನೋಡದೆ ಅವುಗಳ ಹೆಸರುಗಳನ್ನು ಪಟ್ಟಿ ಮಾಡುವುದು. ಹೀಗೆ ಹೆಚ್ಚು ವಸ್ತುಗಳನ್ನು ಪಟ್ಟಿ ಮಾಡಿದ ವಿದ್ಯಾರ್ಥಿಯ ಏಕಾಗ್ರತೆ ಹೆಚ್ಚಾಗಿದೆ ಎಂದು ತಿಳಿಯುವರು. |
| | 10 ನಿ | | | | | ಮೌನ ಓದಿನ ಸಮಯದಲ್ಲಿ ಮಕ್ಕಳು ಸಂಗ್ರಹಿಸಿದ ಹೊಸ ಪದಗಳ ಅರ್ಥ ತಿಳಿಸುವರು. | | | | ಶಿಕ್ಷಕರರು | **ಪೂರ್ವಸಿದ್ಧತಾ ಚಟುವಟಿಕೆ**<br>ಹಿಂದಿನ ಅವಧಿಯ ಗದ್ಯಭಾಗಕ್ಕೆ ಸಂಬಂಧಿಸಿದಂತೆ ಚಿಕ್ಕ ಚಿಕ್ಕ ಪ್ರಶ್ನೆಗಳನ್ನು ಕೇಳುವರು. |
| | 30 ನಿ | | | | ಹಿರೇಮಣಿ | ಶಿಕ್ಷಕರು ಬೋಧಿಸಿದ ಗದ್ಯಭಾಗವನ್ನು ಅಂದವಾಗಿ ತಪ್ಪಿಲ್ಲದೆ ಬರೆಯುವರು. | **ಕನ್ನಡ**<br>**ಮಲೆನಾಡಿನ ಸಿರಿ** | * ಅಪರಿಚಿತ ಸನ್ನಿವೇಶ ........................<br>* ಸನ್ನಿವೇಶ ಮತ್ತು ........................<br>* ಲೇಖನ ಚಿಹ್ನೆಗಳನ್ನು ........................ | | ಶಿಕ್ಷಕರು | **ಕ. ಚಟುವಟಿಕೆ**<br>ಶಿಕ್ಷಕ : "ಎಲ್ಲರೂ ಇಳಿದು ಸಾಲಾಗಿ ಬನ್ನಿ ........................ ........................ ........................ ಹಾರುತ್ತಿವೆ ನೋಡು".<br>ಇಲ್ಲಿಯವರೆಗಿನ ಗದ್ಯಭಾಗವನ್ನು ಸ್ವರ ಭಾರ ಏರಿಳಿತದೊಂದಿಗೆ ಓದುವರು. ನಂತರ ಮಕ್ಕಳಿಗೆ ಮೌನ ಓದು ಕೊಡುವರು. |

| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2ನೇ ಅವಧಿ | 40 ನಿ | ಜೀವನ ವಿಜ್ಞಾನ<br>ಸ್ಥಳೀಯ ಕಥೆಗಳ ಸಂಗ್ರಹ | * ಸ್ಥಳೀಯವಾಗಿ ದೊರೆಯುವ ಕಥೆಗಳನ್ನು ಸಂಗ್ರಹಿಸುವ ಆಸಕ್ತಿ ಬೆಳೆಸುವುದು. | ಪಂಚತಂತ್ರ ಕಥೆಗಳು | ಹಿರೇಮಣಿ | ಹಿರೇಮಣಿಯ ನೇತೃತ್ವದಲ್ಲಿ ಒಂದೊಂದೇ ಮಗುವಿನಿಂದ ಅವನಿಗೆ ಗೊತ್ತಿರುವ ಸ್ಥಳೀಯ ಕಥೆಗಳನ್ನು ಮಕ್ಕಳಿಂದ ಹೇಳಿಸುತ್ತಾ ಹೋಗುವುದು. ಎಲ್ಲಾ ಮಕ್ಕಳು ಆಸಕ್ತಿಯಿಂದ ಆಲಿಸುವರು ಹಾಗೂ ತಮಗೆ ಗೊತ್ತಿರುವ ಕಥೆಯನ್ನು ಹೇಳುವಲ್ಲಿ ಆಸಕ್ತಿ ವಹಿಸುವರು. | ಗಣಿತ<br>ವಿವಿಧ ಸಂಖ್ಯೆಗಳು ಮತ್ತು ಸಂಖ್ಯಾಗಣಗಳು | * ಗಣಗಳ ಕಲ್ಪನೆಯನ್ನು ದೃಢಪಡಿಸುವುದು. | * ಬಣ್ಣದ ಮಣಿಗಳು<br>* ಬೀಜಗಳು | ಶಿಕ್ಷಕರು | **ಪೂರ್ವಸಿದ್ಧತಾ ಚಟುವಟಿಕೆ**<br>ಕೆಲವು ಕಾಳುಗಳು ಮತ್ತು ವಿವಿಧ ಬಣ್ಣದ ಮಣಿಗಳನ್ನು ಕೊಟ್ಟು ಒಂದೇ ರೀತಿ ಇರುವ ಮಣಿ ಮತ್ತು ಒಂದೇ ಜಾತಿಯ ಸಸ್ಯದ ಬೀಜಗಳನ್ನು ಗಣಗಳಾಗಿ ವಿಂಗಡಿಸುವರು. |
| | | | | | | | | | ಅಂಕಿಗಳ ಹಾಗೂ ಸಂಖ್ಯೆಗಳ ಮಿಂಚುಪಟ್ಟಿ | ಶಿಕ್ಷಕರು | ಮಕ್ಕಳಿಗೆ ಅಂಕಿಗಳ ಹಾಗೂ ಸಂಖ್ಯೆಗಳ ಮಿಂಚುಪಟ್ಟಿಗಳನ್ನು ಕೊಟ್ಟು 2 ರಿಂದ ಭಾಗವಾಗುವ ಸಂಖ್ಯೆಗಳ ಗುಂಪು, ಸರಿ ಸಂಖ್ಯೆಗಳ ಗುಂಪು ಬೆಸ ಸಂಖ್ಯೆಗಳ ಗುಂಪು. ಮಾಡಿಸುತ್ತಾ ಕ.ಹ.ಗೆಯ ಮೇಲೆ ಬರೆಯುತ್ತಾ ಗಣದ ಸ್ಪಷ್ಟ ಕಲ್ಪನೆಯನ್ನು ಮಕ್ಕಳಿಗೆ ಮಾಡಿಸುವರು. |
| | 40 ನಿ | ಜೀವನ ವಿಜ್ಞಾನ | * ಸರಳ ವ್ಯಾಯಾಮಗಳ ಪ್ರಾಮುಖ್ಯತೆ ಅರಿಯುವರು. | | | 5ನೇ ಮಕ್ಕಳೊಂದಿಗೆ ಸರಳ ವ್ಯಾಯಾಮಗಳನ್ನು ಮಾಡುವರು. | ಜೀವನ ವಿಜ್ಞಾನ | * ಸರಳ ವ್ಯಾಯಾಮಗಳ ಅನುಕೂಲಗಳನ್ನು ಅರಿಯುವರು. | | ಶಿಕ್ಷಕರು | ಎಲ್ಲ ಮಕ್ಕಳನ್ನು ಆಟದ ಬಯಲಿನಲ್ಲಿ ಸಾಲಾಗಿ ನಿಲ್ಲಿಸಿ ಸರಳ ವ್ಯಾಯಾಮಗಳನ್ನು ಮಾಡಿಸುವರು.<br>ಶಿಕ್ಷಕರ ಮಾರ್ಗದರ್ಶನದಲ್ಲಿ ಸರಳ ವ್ಯಾಯಾಮಗಳಿಂದಾಗುವ ಅನುಕೂಲಗಳ ಬಗ್ಗೆ ತಿಳಿಯುವರು. |

| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ ಅವಧಿ | 30 ನಿ | ಪರಿಸರ ಅಧ್ಯಯನ<br>ಪರಿಸರಲ್ಲಿ ವೈವಿಧ್ಯ | * ಕಾಡು ಬೆಟ್ಟ, ಜಲಪಾತ, ಕಣಿವೆ – ಇಂತಹ ಸ್ವಾಭಾವಿಕ ಭೂ ಲಕ್ಷಣಗಳನ್ನು ಗುರುತಿಸುವರು. | * ಚಿತ್ರ ಪಟಗಳು | ಶಿಕ್ಷಕರು | ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ ಅವರಿಗೆ "ಹಸುರಿನ ಬನದಲಿ ಏನ ಕಂಡೆ" ಎಂಬ ಗೀತೆಯನ್ನು ಅಭಿನಯದ ಮೂಲಕ ಹೇಳಿಕೊಡುವರು. | | | | | 5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ |
| | 50 ನಿ | | | * ಕಾಡು, ಬೆಟ್ಟದ, ದೃಶ್ಯ, ಛಾಯಾಚಿತ್ರ | | ಪಠ್ಯಪುಸ್ತಕದ ಪುಟಸಂಖ್ಯೆ 26 ಮೊದಲು ಕಾಡಿನಲ್ಲಿ ಕಂಡುಬರುವಂತಹ ವಿವಿಧ ಬಗೆಯ ಮರಗಳ ಪಟ್ಟಿ ಮಾಡಿಸುವರು.<br>ನಂತರ ಪ್ರಾಣಿಗಳ ಮತ್ತು ಹಣ್ಣುಗಳ ಪಟ್ಟಿ ತಯಾರಿಸುವರು.<br>ನಂತರ ಕಾಡಿನಿಂದ ಮೊಲವು ತಪ್ಪಿಸಿಕೊಂಡು ಬಯಲಿಗೆ ಬಂದಾಗ ಮೊಲದಲ್ಲಿ ಮೂಡಿ ಬರುವ ಪ್ರಶ್ನೆಗಳನ್ನು ತಿಳಿಸುತ್ತಾ ಅದರ ಆಲೋಚನೆಗಳ ಅರಿವನ್ನು ಮಕ್ಕಳಿಗೆ ಮೂಡಿಸುವರು.<br>ಆಮೇಲೆ ಮೊಲವು ಕೊಳದ ಪತ್ತಿರ ಬಂದು ತನ್ನ ಬಾಯಾರಿಕೆ ತಣಿಸಿಕೊಳ್ಳುವುದನ್ನು ತಿಳಿಯುವರು. | | | | | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಕಲಿಕಾ ಘಟಕ | ಸಾಮರ್ಥ್ಯಗಳು | ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಕಲಿಕಾ ಘಟಕ | ಸಾಮರ್ಥ್ಯಗಳು | ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4ನೇ ಅವಧಿ | 40 ನಿ | ಗಣಿತ<br>ಪೂರ್ಣಾಂಕಗಳು ಮತ್ತು ಸಂಖ್ಯಾ ಸೂಚಕಗಳು (ಏರಿಕೆ–ಇಳಿಕೆ) | * ಕೊಟ್ಟಿರುವ ಸಂಖ್ಯಾ ಸೂಚಕಗಳನ್ನು ಏರಿಕೆ ಹಾಗೂ ಇಳಿಕೆ ಕ್ರಮದಲ್ಲಿ ಜೋಡಿಸುವರು. | ಸಂಖ್ಯಾ ಮಿಂಚುಪಟ್ಟಿಗಳು | ಶಿಕ್ಷಕರು | 375, 320, 350, 390.<br>ಇದನ್ನು ಏರಿಕೆ ಕ್ರಮದಲ್ಲಿ ಬರೆಯಬೇಕಾದರೆ ಮೊದಲು ಚಿಕ್ಕ ಬೆಲೆಯಿಂದ ದೊಡ್ಡ ಬೆಲೆ ಕಡೆಗೆ ಹೋಗುವುದು. 320, 350, 375, 390 ಹೀಗೆ ಎಂದು ತೋರಿಸುವರು.<br>ನಂತರ ಏರಿಕೆ ಕ್ರಮದಲ್ಲಿ ಬರೆಯುವಾಗ ಕೊಟ್ಟ ಸಂಖ್ಯೆಗಳಲ್ಲಿ ಚಿಕ್ಕ ಸಂಖ್ಯೆಯಿಂದಲೂ, ಇಳಿಕೆ ಕ್ರಮದಲ್ಲಿ ಬರೆಯುವಾಗ ಅತ್ಯಂತ ದೊಡ್ಡ ಸಂಖ್ಯೆಗಳಿಂದಲೂ ಪ್ರಾರಂಭಿಸಬೇಕು ಎಂಬುದನ್ನು ತಿಳಿಸಿಕೊಡುವರು.<br>ನಂತರ ಇದೇ ರೀತಿಯ ಕೆಲವು ಲೆಕ್ಕಗಳನ್ನು ನೀಡಿ ಮಕ್ಕಳಿಂದ ಮಾಡಿಸುವರು. | | | | | 5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ |
| | 40 ನಿ | ಸಾ.ಉ.ಕಾ.<br>ಕ್ಯಾಲೆಂಡರ್ ತಯಾರಿಕೆ (ಮುಂದು.) | | * ಕ್ಯಾಲೆಂಡರ್ ನಿಂದ ಕತ್ತರಿಸಲಾದ ದಿನಾಂಕಗಳು | ಶಿಕ್ಷಕರು | ಈಗಾಗಲೇ ಮಕ್ಕಳು ದಿನಾಂಕಗಳನ್ನು ಕತ್ತರಿಸಿ ಇಟ್ಟುಕೊಂಡಿರುವುದರಿಂದ ಶಿಕ್ಷಕರ ಸೂಚನೆಯಂತೆ ನಿರ್ದಿಷ್ಟ ವಾರದಿಂದ ಪ್ರಾರಂಭಿಸಿ ಎಲ್ಲರೂ ಅದರಂತೆಯೇ ಅಂಟಿಸುತ್ತಾ ತಮ್ಮ ತಮ್ಮ ಕ್ಯಾಲೆಂಡರ್‌ಗಳನ್ನು ತಯಾರು ಮಾಡುವರು. | | | | | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ ಅವಧಿ | 10 ನಿ | ಕನ್ನಡ : ನಿಯಮ ಪಾಲನೆ | * ಪದಗಳ ನಡುವೆ ಇರುವ ಅರ್ಥಪೂರ್ಣ ಸಂಬಂಧವನ್ನು ಅರಿಯುವುದು.<br>* ರಸ್ತೆ ಚಿನ್ಹೆಗಳು ಮತ್ತು ಸೂಚನಾ ಫಲಕಗಳಲ್ಲಿನ ಸರಳ ಸೂಚನೆಗಳನ್ನು ಓದುವುದು. | | ಶಿಕ್ಷಕರು | ಮಕ್ಕಳಿಗೆ ಹಿಂದಿನ ಅವಧಿಯಲ್ಲಿ ಬೋಧಿಸಲಾದ ಪಾಠವನ್ನು ಪ್ರತಿ ಮಗುವಿಗೆ 2 ಸಾಲಿನಂತೆ ಬಾಯ್ದೆರೆ ಓದು ಓದಲು ಸೂಚನೆಗಳನ್ನು ಕೊಡುವರು. | ಕನ್ನಡ : ಮಲೆನಾಡಿನ ಸಿರಿ | * ಪರಿಚಿತ ಸನ್ನಿವೇಶಗಳನ್ನು ...................................<br>* ಸನ್ನಿವೇಶ ಮತ್ತು ಘಟನೆಗಳನ್ನು ವಿವರಿಸುವುದು.<br>* ಲೇಖನ ಚಿನ್ಹೆಗಳನ್ನು ವಾಕ್ಯಗಳಲ್ಲಿ ಬಳಸುವುದು. | | ಹಿರೇಮಣಿ | ಹಿಂದಿನ ಅವಧಿಯಲ್ಲಿ ಬೋಧಿಸಿದ ಗದ್ಯಭಾಗವನ್ನು ಮಕ್ಕಳಿಂದ ಓದಿಸುವರು. |
| | 30 ನಿ | | | | ಹಿರೇಮಣಿ | ಶಿಕ್ಷಕರು ಕೊಟ್ಟ ಸೂಚನೆಯಂತೆ ಎಲ್ಲ ಮಕ್ಕಳಿಂದ ಓದಿಸುವನು ಮತ್ತು ತಪ್ಪುಗಳನ್ನು ತಿದ್ದಿ ಹೇಳುವನು. | | | | ಶಿಕ್ಷಕರು | "ಶಿಕ್ಷಕ : ಎಲ್ಲರೂ ಇಳಿದು ಸಾಲಾಗಿ ....................................<br>.......................................................................................<br>.......................................................................................<br>.................................................... ಹೇಗೆ ಹಾರುತ್ತಿವೆ ನೋಡು".<br>ಈ ಗದ್ಯಭಾಗವನ್ನು ವಿವರಿಸುತ್ತಾ ಮೌನ ಓದಿನ ಸಮಯದಲ್ಲಿ ಗುರ್ತಿಸಿದ ಹೊಸ ಪದಗಳ ಅರ್ಥ ತಿಳಿಸುವರು. |
| | 10 ನಿ | | | | ಹಿರೇಮಣಿ | ಮೇಲಿನ ಚಟುವಟಿಕೆ ಮುಂದುವರಿಸುವರು. | ಜೀವನ ವಿಜ್ಞಾನ : ದಿನಪತ್ರಿಕೆ ಓದುವುದು. | * ಓದುವ ಕೌಶಲ ಬೆಳೆಸುವುದು.<br>* ಮುಖ್ಯಾಂಶಗಳನ್ನು ಗುರ್ತಿಸುವ ಕೌಶಲ ಬೆಳೆಸುವುದು. | * ದಿನ ಪತ್ರಿಕೆಗಳು | ಶಿಕ್ಷಕರು | ವೃತ್ತ ಪತ್ರಿಕೆಯನ್ನು ಮಕ್ಕಳಿಗೆ ನೀಡಿ, ಓದಿ ಮುಖ್ಯಾಂಶಗಳನ್ನು ಪಟ್ಟಿ ಮಾಡಲು ತಿಳಿಸುವರು. |
